ಸಂಕ್ರಾಂತಿ

ಶ್ರೀನಿವಾಸ

ಜೀವನ ಕಾರ್ಯಾಲಯ
ಬೆಂಗಳೂರು.

ಶ್ರೀ ವಿ. ಸೀತಾರಾಮಯ್ಯನವರಿಗೆ
ಪ್ರೀತಿಯಿಂದ
ಶ್ರೀನಿವಾಸ
ಬೆಂಗಳೂರು
25.5.70

ಸಂಕ್ರಾಂತಿ

ಶ್ರೀನಿವಾಸ

ಜೀವನ ಕಾರ್ಯಾಲಯ
ಬೆಂಗಳೂರು.

ಮೊದಲ ಮುದ್ರಣ: ೧೯೬೪

ರೂ. ೧-೨೦

ಮುದ್ರಣ:
ಪ್ರಧಾನ್ ಪ್ರಿಂಟರ್ಸ್
ಬೆಂಗಳೂರು.

ಮುನ್ನುಡಿ

ಇದು ನಾನು ಈ ಇಪ್ಪತ್ತು ವರ್ಷಗಳಲ್ಲಿ ಆಗಾಗ ಬರೆದ ಪದ್ಯಗಳ ಸಂಕಲನ. ಹಲವು ಆಕಾಶವಾಣಿಯಲ್ಲಿ ಪ್ರಸಾರಕ್ಕಾಗಿ ಅದರ ಪ್ರವರ್ತಕರ ಅಪೇಕ್ಷೆಯಂತೆ ರೂಪುಗೊಂಡವು. ಎರಡು ಕವಿತೆ ಹೊರತು ಉಳಿದವು "ಜೀವನ" ಪತ್ರಿಕೆಯಲ್ಲಿ ಅವು ರಚಿತವಾದ ತರುಣದಲ್ಲಿ ಪ್ರಕಟವಾದುವು. ಮಹಮದ್ ಗುರುವನ್ನು ಕುರಿತ ಕಥನಕವನ "ನವರಾತ್ರಿ" ಗ್ರಂಥದಲ್ಲಿ ಸೇರಲು ಸೃಷ್ಟಿಯಾಯಿತು. ಇದನ್ನು ಒಬ್ಬ ಹಿಂದೂ ಮಿತ್ರರು ಹೇಳಿದಂತೆ, ಒಬ್ಬ ಮಹಮ್ಮದೀಯ ಮಿತ್ರರು ಹಿಂದೂ ಆಚಾರ್ಯರೊಬ್ಬರನ್ನು ಕುರಿತ ಕತೆಯನ್ನು ಹೇಳಿದಂತೆ, ಆ ಪುಸ್ತಕದ ಕಥೆಗಳಲ್ಲಿ ಎರಡು ಕಥೆಯನ್ನು ಸೇರಿಸಬೇಕೆಂಬ ಯೋಚನೆ ಇತ್ತು. ಉಳಿದ ಕಥೆಗಳೇ ಸಾಕಾದಷ್ಟು ಆಗಿ ಇವನ್ನು ಆ ಮಾಲೆಯಲ್ಲಿ ಸೇರಿಸದೆ ನಿಲ್ಲಿಸಬೇಕಾಯಿತು. ಈ ಕಾರಣದಿಂದ ನಮ್ಮ ಆಚಾರ್ಯರಲ್ಲಿ ಒಬ್ಬರನ್ನು ಕುರಿತ ಕಥೆ ಸೃಷ್ಟಿಯಾಗಲಿಲ್ಲ.

ಬರೆದು ಪ್ರಕಟವಾದ ಅಥವಾ ಆಗದ ಈ ಕವಿತೆಗಳು ನನ್ನ ಬರಹವನ್ನು ನೋಡಬೇಕೆನ್ನುವವರಿಗೆ ಒಂದು ಕಡೆ ದೊರೆಯುವಂತೆ ಮಾಡುವುದಕ್ಕಾಗಿ ಈ ಸಂಕಲನವನ್ನು ಪ್ರಕಟಿಸಿದ್ದೇನೆ.

ಈ ಮೊದಲಿನ ನನ್ನ ಕೃತಿಗಳಿಗೆ ತೋರಿಸಿದ ಅಕ್ಕರೆಯನ್ನು ಸಹೃದಯರು ಇದಕ್ಕೂ ತೋರಿಸಲಿ ಎಂದು ನನ್ನ ಪ್ರಾರ್ಥನೆ.

ಬೆಂಗಳೂರು
ಸೌಮ್ಯ ಸಂವತ್ಸರ
ಆಶ್ವೀಜ ಶುದ್ಧ ಸಪ್ತಮಿ — ಶ್ರೀನಿವಾಸ.
೧೬-೧೦-೬೯

ಸಂಕ್ರಾಂತಿ

ಸಂಕ್ರಾಂತಿ

ಸಂಕ್ರಾಂತಿ

೧

ವರುಷವೆಲ್ಲ ಬಸಿರಲಿ ಬೆಳಸಿದ ಬೆಳೆ
ತುಂಬಿರೆ ಉಡಿಯಲ್ಲಿ ;
ಹೆರಳ ಕಪ್ಪ ಬೆಳಗುವ ಹೂವಾಗಿ
ಅರಿಲಿರೆ ಮುಡಿಯಲ್ಲಿ ;
ಮೂಡಲು ಬಡಗಲ ಮೂಲೆಯ ಗಾಳಿಯ
ಸೋಕಿಗಂಜಿ ಬೆರೆತ
ಗಿಡ ಮರ ಬಳ್ಳಿಯ ಒಡಲಲಿ ಪ್ರಕೃತಿ,
ಸಾಕೀ ಎದೆ ಕೊರೆತ,
ಮರಳಿ ಬರನೆ ಚೈತ್ರಾನಿಲ, ಬಾರವೆ
ಅಂದಿನ ಸುಖ ಶಾಂತಿ,
ಎಂದು ಸುಯ್ಯುತಿರೆ: ತಾಯ ಸಂತಯಿಸೆ
ಬಂದಿದೆ ಸಂಕ್ರಾಂತಿ.

ಸಂಕ್ರಾಂತಿ

"ತೆಂಕಣ ಮೊಗವಾಗಿರನೇ ಗ್ರಹಪತಿ
ಈಗ? ಇಕೋ ಇತ್ತ
ಪ್ರಸನ್ನ ದೃಷ್ಟಿಯನೆಸೆದನು; ಇನ್ನದು
ಎಲ್ಲಾ ಸಂಪತ್ತ
ತಡೇ ತರುವುದು. ಚೈತ್ರಾಸಿಲನಾ
ಅಪಾರ ದೂರದಲಿ
ನೆನೆದನು ಮೋಹದ ಬನವಸೆ ನಾಡನು.
ನಿಲುವನೆ ಬಾರದಲೆ?
ತೊರೆವನೆ ಮಲ್ಲಿಗೆಯನು ಇಮ್ಮಾವನು?
ಇದೊ ಪವನ ವದಂತಿ:
ಅಲರಿ ಎಲರವನು ಬಹುದ ಸೂಚಿಸಿದೆ,"
ಎಂದಿದೆ ಸಂಕ್ರಾಂತಿ.

ರಾಮನ ಸುದ್ದಿಯ ದೇವಿಗೆ ಸಲಿಸಿದ
ಮಾರುತಿವೊಲು, ಹಬ್ಬ
ಪ್ರಕೃತಿಯ ಚಿಂತೆಯ ಹರಿಸಿದೆ; ಕಳೆದಿದೆ
ಒಳಹೊರಗಿನ ಮಬ್ಬ.
ಕೈಸೇರುವ ಮುನ್ನವೆ ಸುಖ ಮನದಲಿ
ಹಚ್ಚುವ ತಣ್ ಬೆಳಕ
ಹೊಳಪಿನಿಂದ ಮೂಡಿದೆ ಎಲ್ಲೆಡೆಯಲಿ
ಆನಂದದ ಪುಳಕ.
ಚಳಿಯ ಕೊಡವಿ ಗಿಡ ಮರ ಲತೆ ತಳರಿವೆ;
ಸಾರಿರೆ ಸಂಕ್ರಾಂತಿ,
ಜನದಲಿ ನೆಲ ಬನ ಬಾನಲಿ ತೊಳಗಿದೆ
ಅಪೂರ್ವ ನವ ಕಾಂತಿ.

೨

ಮಾತೆಯ ಸಂತಸ ಮಕ್ಕಳ ಮುಟ್ಟಿದೆ.
ಹೊಲಗಳ ಹಸನೆಳ್ಳು,
ಗದ್ದೆಯ ಬಯಲಿನ ಕಬ್ಬಿನ ಜಲ್ಲೆ,
ಆಲೆಯ ಬಿಸಿಬೆಲ್ಲ,
ಮಣ್ಣೆರೆತ ಕೊಂಬು ಸೋಗೆಯ ಅರಿಸಿನ,
ಕಾಪಿನ ಹೊಸನೆಲ್ಲು,
ಸೇರಿವೆ ಸಿರಿದಾರಿದ್ರ್ಯವನೆಣಿಸದೆ
ಊರ ಮನೆಯನೆಲ್ಲ.
ಊರ ಕಾವ ಈ ತಾಯ ಸಮೃದ್ಧಿ
ಕಾಂಬುದು ಕಾಡಿನಲು,
ಜನ ಬೆಳೆದ ಕಾಳಿನಿಸೀತು ಸೇರಿರಲು
ಹಕ್ಕಿಯ ಗೂಡಿನಲು.

ಅನ್ನ ಬಂದೆಡೆಗೆ ಅದನುಂಬ ಬಾಯಿ
ಬಾರದೆ ಇದ್ದೀತೆ?
ತಂದಿಹಳೆಳೆಯುಸಿರನು ತಾಯ್ ಮನೆಗೆ
ಗೂಡಿಗೆ, ಸಂಪ್ರೀತೆ.
ಅರಸಿತಿ ಬೇಡಿತಿ ಹಸುಳೆಯ ಹೆತ್ತಿರೆ,
ಹೆತ್ತ ಎಳೆಯ ಮರಿಯು,
ಕಾಗೆ ಕೋಗಿಲೆ ಸಾರ್ಚಿವೆ ಜಗದಲಿ
ಆಶೆಯ ವಲ್ಲರಿಯು.
ನಳಿಯೆಳೆ ಬಾಳಿನ ಸೊಂಪನು ಸೂಸುತ
ಸಂದಿರೆ ಸಂಕ್ರಾಂತಿ,
ತಳಿತಿದೆ ಎಲ್ಲೆಡೆ ಯಾವುದೊ ವಿಭ್ರಮ,
ಏನೊ ಸುಸಂಭ್ರಾಂತಿ.

ಸಂಕ್ರಾಂತಿ

ಗೊಂಚಲು ಗೊಂಚಲು ಹೂತಿದೆ ಮಾವು :
ಹೂತುರುಗದೆ ಸುರಗಿ?
ಮಲ್ಲಿಗೆ ಅರಳಲಿ ಮಲರಲು ತೊಡಗಿದೆ.
ಏತಕೊ ಮನ ಕರಗಿ
ಬನದಾಳದಿ ಕೂ ಎಂದೆಳೆ ಕೋಗಿಲೆ
ಕರೆದಿದೆ ; ಆಕೊ ಕುಕಿಲು.
ದಿನ ದಿನ ಹರಿದಿರೆ ನಿಡಿನಿಡಿದಾಗಿ
ಬೆಳೆಯುತಲಿವೆ ಹಗಲು.
ಮನಜಲ ತಿಳಿದಿವೆ ; ಗಂಧರ್ವರದೊ
ಕಿನ್ನರರದೊ ಎಂಬ
ಕೇಳಿ ಕೇಳಿಸದ ಮೃದು ಮಧುಗುಂಜನ
ತೀವಿದೆ ನಭದಿಂಬ.

೩

"ಹಿಂಗಡೆ ಚಳಿ, ನಿಡಿದಿರುಳು, ಹಿಮಂತ ;
ಮುಂದಿಹುದು ವಸಂತ.
ಸಾವು ಹುಟ್ಟು ಸುಖಬೇನೆ ಸಂಸ್ಕೃತಿಯು
ಕಡಲಿನ ಅಶ್ರಾಂತ
ಅಂತ್ಯ ವಿರಹಿತ ತರಂಗದೇರಿಳಿತ.
ಇಳಿತದ ಮುಗ್ಗುಲಲಿ

ಏರು ಇದೆ ಕಣಾ: ಮನ ಸಮ ಇರಲಿ;
   ಎದೆಯಲಿ ಹಿಗ್ಗಿರಲಿ;
ಹಚ್ಚಡವಿರೆ ಚಳಿ ಭೋಗದ ವಸ್ತು;
   ಬೇಡ ವೃಥಾ ಚಿಂತೆ.
ನೋಡು ಬಾಳೊಳಿಹ ಒಳಿತು ಸಂತಸವ,"
   ಎಂದಿದೆ ಸಂಕ್ರಾಂತಿ.

೪

ತುಂಬಿದ ಬೋಗುಣಿ ಹಾಲನು ಹೊಸಸೊಸೆ
   ಒಲೆಯ ಮೇಲೆ ಇಕ್ಕಿ,
ಈ ಮನೆಯೈಸಿರಿ ಇಂತು ಹೊಂಗಲೆನೆ,
   ಹೊಂಗಿತು ಅದು ಉಕ್ಕಿ.
ಬೆಳಗಿಗೆ ತೌರಿಗೆ ಬಹ ಮಗಳನ್ನದ
   ಬಣ್ಣದ ಹಿಡಿ ಹಿಡಿಯ
ಹಿಡಿದು ನಿವಾಳಿಸಿ, ಬೆಳೆಯೆ ಹರಸುವಳು
   ಒಡಹುಟ್ಟಿನ ಕುಡಿಯ.
"ಮನೆಯ ಸಂಪದದ ಮೂರ್ತಿಗಳಿವರು,
   ಗೃಹಲಕ್ಷ್ಮಿಯರಿಂತೀ
ಹಡೆದ ಹೆಣ್ ಬಂದ ಹೆಣ್," ಎಂದೋದಿಸಿ
   ತೋರಿದೆ ಸಂಕ್ರಾಂತಿ.

ಬಣ್ಣದ ರೇಶಿಮೆ ಚಿನ್ನದ ಕಾಗಿನ
   ಸೀರೆಗಳನು ಉಟ್ಟು,
ಅಂದಿಗೆ ಕಂಕಣ ಬಂದಿ ಬಾವಲಿ
   ಓಲೆ ಮೂಗುಬಟ್ಟು,
ಕಂಠಿಕೆ ಜಡೆಬಿಲ್ಲೆಯಲಂಕರಣದ
   ಹರದೆಯರೆಳೆ ಮಗುವ

ಸಂಕ್ರಾಂತಿ

ಎದೆಗಳಿಗಪ್ಪಿ, ಕಂಕುಳಲಿರುಕಿ,
   ತಮ್ಮಾ ನಗೆಯುಗುವ
ಮೊಗದಲಿ ನೆರೆ ಹೊರೆ ಮನೆಗಳ ಸಾರಿ
   ಎಳ್ಳು ಬೆಲ್ಲ, ಅಂತೇ
ಬಗೆಯ ಹರ್ಷವನು, ಬೀರುತ ನಡೆಯೆ
   ಬೆಳಗಿದೆ ಸಂಕ್ರಾಂತಿ.

ಮಾರಿಮ್ಮನ ಗುಡಿ ಮುಂಗಡೆ ಪಂದ್ಯಕೆ
   ಸಂದಣಿಸಿದೆ ಮಂದಿ :
ಹಬ್ಬಕೆ ಬಂದಿಹ ಊರಳಿಯಂದಿರ
   ನಗಲಿದುವೆ ಸುಸಂಧಿ.
"ದೇವಿಯ ಮುಂಗಡೆ ಬಿದ್ದಿಹ ಗುಂಡನು
   ಎತ್ತಿರಿ : ಏನಳವೆ ?
ಇಲ್ಲವೆ ನಮ್ಮಾ ಹುಡುಗಿಯನಾಳಲು
   ಅದೇನು ಕೇವಳವೆ ?"
ಒಕ್ಕೈಲ ನೋಡುವ ತೆರ ಅಳಿಯದಿರು
   ನಗುತುಜ್ಜುಗಿಸುವರು ;
"ಮೈದುನನಕ್ಕಗೆ ಸೋತೆ" ಎನ್ನುತ
   ಊರನು ನಗಿಸುವರು.

ದನಗಳ ಮಾಳಕೆಬಿಡದೆಯೆ ಕೋಡಿಗೆ
   ಬಣ್ಣ ಬಳಿದು, ಹೊಚ್ಚ
ಕುಚ್ಚು ವಸ್ತ್ರವನು ಕಟ್ಟಿ, ಒಕ್ಕಲು
   ಮುಚ್ಚಂಜೆಗೆ ಕಿಚ್ಚ
ಅವನು ಹಾಯಿಸಿದೆ ; ತರುಣರು ಛಲದಲಿ
   ಬೆಲೆತೊಡವಿನ ದನವ..

ತಡೆದು, ಸಿಂಗರವ ಸುಲಿದು, ತೋಳೆತ್ತಿ
  ಮೆರೆದರು ಕಲಿತನವ.
ಅಂದು ಭೀಮ ಕರ್ಣಾರ್ಜುನರುಬ್ಬಿನ
  ಎದೆಯೊಳಾವ ತಂತಿ
ಮಿಡಿಯಿತು ಅದೆ ಮಿಡಿದಿದೆ ಧೀರರಲಿ
  ಇಂದಿನ ಸಂಕ್ರಾಂತಿ.

ದೀಪ ಹಚ್ಚಿರಲು ಮನೆಯಲಿ ಮಕ್ಕಳ
  ಹಸೆಯಲಿ ಕುಳ್ಳಿರಿಸಿ,
"ಮೇಲಾಗಿ ಬಾಳು ನೂರಾಗೆ ಬಾಳು,"
  ಎಂದವರನು ಹರಸಿ,
"ದೇವನ ಕೃಪೆ ಸಿರಿ ಸಂತಸ ಚೆಲುವನು
  ಸುರಿಯುತಿಂತು ನಿನ್ನ
ಸಾವಿರ ಕಾಲಕು ಸಲಹಲಿ ಮಗುವೇ
  ಸುಖಿಯಾಗಿರು ಚಿನ್ನ,"
ಎಂದು ತಾಯ್ದಿರೆರೆವರು ಶೀರುಂಡೆ ಹೊನ್
  ಹೂವನವರ ಮೇಲೆ:
ಅಕ್ಕರೆಯೆ ಶೀರು ಹೂ ಹೊನ್ನಾಗಿ
  ಸಂಕ್ರಾಂತಿಯ ವೇಳೆ.

ಸಂಜೆಗೆ ದೇವರ ಉತ್ಸವ ಊರಲಿ
  ಬಿಜಯಿಸಿತೆಲ್ಲ ಕಡೆ ;
ಉದಯಕೆ ತೌರನು ಹರಸಲು ದೇವಿ
  ಬರುವರು ಬಾವಿಯೆಡೆ.
ತುಪ್ಪದ ಅನ್ನ, ಸಕ್ಕರೆ ಪೊಂಗಲು,
  ಪಾಯಸ ಪನಿವಾರ,

ಕಬ್ಬಿನ ಜಲ್ಲೆ, ಮಕ್ಕಳ ಲಲ್ಲೆ,
ಮಂಗಳ ಮಣಿಹಾರ,
ಸುಬ್ಬನ ಓಲಗ, ರಂಗನ ಡೋಲು,
ಸೈ ಬಾಜ ಬಜಂತ್ರಿ,
ಹಿರಿ ಕಿರಿಯೆಲ್ಲರ ಬಗೆಯ ತುಂಬುವವು,
ತುಂಬಲು ಸಂಕ್ರಾಂತಿ.

ಸಕಲ ಪ್ರಕೃತಿ ಬಾಳ್ವಿಗೆ ಬಲ ನೆರೆಯೆ
ಸೆಳೆದುಸಿರೀ ಹಬ್ಬ ;
ಹೊರಗಿನ ಒಳಗಿನ ಐಸಿರಿ ಸೌರಭ
ನೆಯ್ದಿಹ ಸವಿಗಬ್ಬ :
ಜೀವದುಗಮ, ಅದ ಹೊರೆಯುವ ಮಮತೆ,
ಕಲೆ ಬೆಡಗು ವಿಲಾಸ,
ಛಲಗೆಲವು ಭಕ್ತಿ, ಚೆಲುವೊಲವು ಶಕ್ತಿ,
ಸರಸ ವಿಮಲ ಹಾಸ,
ಇನಿತೆಲ್ಲ ಸೊಗಸ ಮೈಗೊಂಡು ಇದಿರು
ನಿಂದಿರೆ ಸಂಕ್ರಾಂತಿ
ಜನದಲಿ ಮನದಲಿ ಮನೆಯಲಿ ನಾಡಲಿ
ಸೊರೆದಿದೆ ಸುಖಶಾಂತಿ.

ಸಂಕ್ರಾಂತಿ

ಈ ಮನ ಬನ ಮನೆ ನಾಡಲಿ ಒಳಿತನು
ಸೊರೆದಿಹ ಸಂಕ್ರಾಂತಿ
ಸಾರು ಲೋಕದಲ್ಲೆಡೆಯನು ; ನಿನ್ನಯ
ಸುಖಶೀತಲ ಕಾಂತಿ
ಮಾನವನನ್ವಯುವನು ಕಾಡುತಲಿಹ
ಬೇನೆ ಭಯಭ್ರಾಂತಿ
ಸಾವು ಶಂಕೆ ಕಷ್ಟಕೆ ಆದನಿತು
ನೀಡಲಿ ವಿಶ್ರಾಂತಿ.
ಇಲ್ಲಮೆ ಕಳ್ತಲು ಸಾವುಗಳಿಂದ
ಜಗವನು, ಸನ್ಮಂತ್ರಿ,
ಇರವಿನ ಬೆಳಕಿನ ಅಮೃತದ ಪದಕೆ
ನಡೆಯಿಸು ಸಂಕ್ರಾಂತಿ.

'ಸತ್ಯಮೇವ ಜಯತೇ'

ಮಾತೇ ಭಾರತಮಾತೇ
ಸಕಲ ಭುವನ ವಿಖ್ಯಾತೇ
ದೇವದೇವ ಸುಪ್ರೀತೇ
ಅಭಿಜಾತೇ ಪೂತೇ
ಮಾತೇ ಭಾರತಮಾತೇ

ಯುಗದಾದಿಯಲೀ ಭೂಮಿಯ ಹರಹನು
ದೃಷ್ಟಿಸಿ ಲೋಕೇಶ
ಚೆಲುವಿಗೆ ಹರ್ಷಿಸಿ ಇದರ ಮಧ್ಯದಲಿ
ಈ ಭಾರತದೇಶ
ಮಂಗಲ ಗುಣಗಳ ಮಂದಿರವಾಗಲಿ
ಹಿರಿದೆನಿಸಲಿ ಎನುತೆ
ತನ್ನ ಸತ್ವವನು, ಕೃಪಾಳು, ನಿನ್ನೆಡೆ
ಇಟ್ಟನು ಹೇ ವಿನುತೆ.
ಮಾತೇ ಭಾರತಮಾತೇ........

"ಸತ್ಯಮೇವ ಜಯತೇ"

ಒಡೆಯನಾಣತಿಗೆ ಶಿರವನು-ಬಾಗಿದೆ
ಸತ್ಯ ಧರ್ಮ ನಿಷ್ಠೆ ;
ಒಳ್ಳೆಯ ವ್ರತವನು ಲೋಕದ ಎದುರು
ತಳೆದು ನಿಂತೆ ಶ್ರೇಷ್ಠೆ ;
ಮೌಳಿ ಮಕುಟವೆನೆ ನಿಂತ ಹಿಮಾಚಲ
ನಿನ್ನಯ ಉನ್ನತಿಯ
ಬೆಳಗಿತು ; ಗಂಗೆಯ ವಾಹಿನಿ ಹಾಡಿತು
ಈ ಸಂಪನ್ನತೆಯ.
ಮಾತೇ ಭಾರತಮಾತೇ........

ಶತಮಾನವ ಮರೆಯಿಸಿ ಶತಮಾನ
ಹೊಳೆ ಹರಿದಿರೆ ಕಾಲ,
ಕೋಟಿ ಕೋಟಿ ಸಂತಾನಕೆ ಮಾತೆ
ನೀ ಬಾಳಿನ ಮೇಲ
ತೋರಿ ರಕ್ಷಿಸಿದೆ, ಹೇ ಅಭಿಜಾತೆ,
ಮಕ್ಕಳ ಲಾಲಿಸಿದೆ ;
ಸತ್ಯದಿ ನಡೆವುದೆ ಸಂಪದ ಎಂಬುದ
ಕಲಿಸಿದೆ ಪಾಲಿಸಿದೆ.
ಮಾತೇ ಭಾರತಮಾತೇ........

ಮೊದಲಾ ದಿನದಲೆ ಋಷಿಗಳು ಕೇಳಿದ
　　ವೇದದ ನಿರ್ಘೋಷ,
ಮುಂದಿನ ಕಾಲದ ದರ್ಶನ ಸ್ಮೃತಿ
　　ಪುರಾಣ ಇತಿಹಾಸ,
ನಾಡಿನ ಕಾಡಿನ ಕವಿಕುಲ ಹಾಡಿದ
　　ಕೃತಿತತಿ, ಅವು ಎನಿತೂ
ರಸವ ತೀರ್ಥ ಗೆಯ್ದಿಸೆದವು ; ತಾಯೇ
　　ಎನಿತು ಹಿರಿಮೆ ನಿನತು !
ಮಾತೇ ಭಾರತಮಾತೇ........

ಪುರು ಕುರು ಯಾದವ ಸೂರ್ಯಾನ್ವಯಗಳ
　　ಅರಸರು ಒಸಗೆಯಲಿ
　ಲೋಕವ ಹೊರೆದರು ತಾಯ್ ನಿನ್ನೆದುರಲಿ
　　　ಕಾಲದ ಹಸುಗೆಯಲಿ.
　ಸತ್ಯಮೇವ ಜಯತೇ ನ ಅನೃತಂ
　　　ಎಂಬಮೋಘ ಸೂತ್ರ
　ನೀನು ನೂತುದೌ; ಅದನು ಮರೆಯದೆ
　　　ನಡೆದೆ ನೀನು ಮಾತ್ರ.
　ಮಾತೇ ಭಾರತಮಾತೇ........

ಧರ್ಮಪರಾಯಣೆ ನಿನ್ನ ಸುಶೀಲಕೆ
ಮೆಚ್ಚಿ ಲೋಕನಾಥ
ನಿನ್ನೆಡೆಗವತರಿಸಿದನೆನಿತೊಮ್ಮೆ
ಸದ್ಗುಣ ಸಂಪ್ರೀತ;
ಮಾನವ ಜಾತಿಯ ಮೇಲ್ಮೆಯ ಮೆರೆದು
ಇದುವೇ ನಿಶ್ಶಂಕ
ದೈವತ ಎಂದನು. ಅಂತಿರೆ ನೆಲ ಬಲ;
ಸ್ವರ್ಗವೆ ಎಡವಂಕ.
ಮಾತೇ ಭಾರತಮಾತೇ........

ಕಾಲಕ್ರಮದಲಿ ಇಂತೆಂದರಿಯದೆ
ನಿನ್ನ ಮರೆತು ನಾವು
ಬೇರೆ ಜನರ ಕಾಲಡಿ ಸಿಲುಕಿದೆವು;
ಬೇಡ ಬೇರೆ ಸಾವು.
ಕದ್ರುಸೂನುಗಳು ವಿನತೆಯ ಪುತ್ರನ
ಹೆಗಲನೇರಿ ದುಡಿಸಿ
ಕಾಡಿದ ಪರಿಯನು ಹೆರವರ ಹೊತ್ತು
ಸವಿದೆವು ನೂರ್ಮಡಿಸಿ.
ಮಾತೇ ಭಾರತಮಾತೇ........

ಸವಿದು ಸೋತು ಇದು ಸಾಕಿನ್ನೆಂದೆವು ;
ಮೊರೆದೆವು ಕೋಪದಲಿ.
ಕಷ್ಟವ ನೋಡಿದೆ, ಕನಿಕರ ತಾಳಿದೆ,
ನೀನನುತಾಪದಲಿ ;
ದೇವನ ಬೇಡಿದೆ, ಕುವರರ ದಾಸ್ಯವ
ಬಿಡಿಸು ಎಂದು ಸೋತೆ ;
ಅಸ್ತು ಎಂದನಿದೊ ಬಿಡುಗಡೆ ದೊರೆತಿದೆ
ನೋಡು ದೇವಿ ಮಾತೆ.
ಮಾತೇ ಭಾರತಮಾತೇ........

ಮರಳಿ ಧರ್ಮವನು ಪುರೆಯುದಂದದಲಿ
ನಮ್ಮನು ನಡೆಸವ್ವ ;
ಸತ್ಯಮೇಯ ಜಯತೇ ನಂಬಿಕೆಯನು
ಉಸಿರಿಗೆ ತೊಡಿಸವ್ವ;
ಲೋಕಕೆ ಶುಭವನು ತಹ ಪಥ ಇದುವೇ
ಎಂಬುದ ಕಲಿಸವ್ವ;
ದಾರಿಯ ತೋರಲು ನಮ್ಮನು ಅನುಜರ
ಮುಂಗಡೆ ನಿಲಿಸವ್ವ.
ಮಾತೇ ಭಾರತಮಾತೇ........

"ಉದಾರಚರಿತಕೆ ವಸುಧೆ ಕುಟುಂಬ;
ಜೀವರಾಶಿ ಬಂಧು;
ದೇಶದ ವರ್ಣದ ಭೇದ ವೃಥಾಭ್ರಮೆ;
ಮಾನವ ಕುಲ ಒಂದು;
ಧರ್ಮ ಜಾತಿ ಮತ ಎಲ್ಲವ ಸಾರ್ಥಕ
ಗೆಯ್ವುದು ಸಹೃದಯತೆ;
ಸರ್ವಭೂತಹಿತರತಿಯೇ ಧರ್ಮ,
ಸತ್ಯಮೇವ ಜಯತೇ,"
ಮಾತೇ ಭಾರತಮಾತೇ........

ಇಂತು ಪೂರ್ವದಲಿ ಋಷಿಚೇತನದಲಿ
ಯಾವ ತತ್ತ್ವ ಮೂಡಿ
ಮೃತ್ಯುವಗೆಲಿದಮೃತತ್ವವ ತಂದಿತು
ಆದ ಲೋಕದ ರೂಢಿ
ಮಾಡುವಂದದಲಿ ಬಾಳಿಯೇವು; ನೀ
ಅಂತು ನಮ್ಮ ತಿದ್ದು;
ಬೆಳೆಯಲಿ ಭಾರತ ಪುತ್ರರ ಬಾಳಲಿ
ಜಗವ ಹೊರೆವಮರ್ದು.
ಮಾತೇ ಭಾರತಮಾತೇ........

ವಿಶ್ವವಿಶಾಲ ಸಹೃದಯತೆ ಮೊಳೆಯಲಿ
ನಮ್ಮಾ ಬಾಳಿನಲಿ ;
ಲೋಕಕೆ ದಾರಿಯ ತೋರಲಿ ನಮ್ಮಾ
ಬಾಳುವೆ ನಾಳಿನಲಿ ;
ಮೊಳಗಲಿ ಭಾರತ ಜನಮನ ಗಿರಿ ವನ:
"ಸತ್ಯಮೇವ ಜಯತೇ
ಸತ್ಯಮೇವ ಜಯತೇ ನ ಅನೃತಂ
ಸತ್ಯಮೇವ ಜಯತೇ."

ಮಾತೇ ಭಾರತಮಾತೇ
ಸಕಲ ಭುವನ ವಿಖ್ಯಾತೇ
ದೇವದೇವ ಸುಪ್ರೀತೇ
ಅಭಿಜಾತೇ ಪೂತೇ
ಮಾತೇ ಭಾರತಮಾತೇ.

ಮೊರೆ

ಒಡಹುಟ್ಟಿದ ಜನ ಮರುಳಿಗೆ ಸಿಲುಕಿದೆ ;
ಒಡಹುಟ್ಟೆಂಬುದ ನೆನೆಯದಿದೆ ;
ಒಡಹುಟ್ಟನು ಹಗೆಯೆನ್ನುತ ಕೊಂದು
ನಲಿದಿದೆ ಸಾವಿನ ವಿನಿಮಯದೆ.

ದೇವರ ಅಲ್ಲಾಃ ಎಂದೆನೆ ಇಸ್ಲಾಂ ;
ಹರಿ ಹರ ಎಂದೆನೆ ಅದು ಹಿಂದು.
ಅಲ್ಲಾಃ ಎನೆ ಸೋದರ ; ಹರಿ ಹರ ಎನೆ
ಸೋದರತನ ಮುಗಿಯಿತೆ, ಬಂಧು ?

"ಹೆಸರು ಮಾತ್ರವೇ ? ಎಣಿಕೆಯೆ ಬೇರೆ"
ಎಂಬರೆ ? ಎಣಿಕೆ ಅದಿನ್ನೆನಿತು
ಬೇರೆಯಾದರೂ ಬೇರೆಯಾಗುವಳೆ
ಹೆತ್ತ ತಾಯಿ ? ಕಡು ಬನ್ನವಿದು.

ಸಂಕ್ರಾಂತಿ

ಅರಿಯದ ದಿನದಲಿ ನಮ್ಮಲಿ ನಾವೇ
ಮಾಡಿದ ಭೇದದ ಕಿರಿಕಿಡಿಯು
ಹೆರವರು ಬೆಳಸಿದರಹುದು : ಅದಿಂದು
ಸುಡುತಿರುವುದು ಬಾಳಿನ ಗುಡಿಯು.

ವಿಸವ ತಿಂದೆಮಗೆ ಅಮರತೆ ಏತಕೆ
ದೊರೆಯುವುದೊ ಎನ್ನುವ ಬಿಸವಂಸ.
ಅಮರತೆ ! ಜನತೆಯ ಒಡಲನೆ ಕೊಲ್ಲಲು
ಜ್ವರ ಬಂದಿದೆ ಆ ವಿಷದಿಂದ.

ನಾಡ ಭಾಗ್ಯದಧಿದೈವವೆ ನಮ್ಮಾ
ತಪ್ಪನು ಮರೆ. ಬಿಡಲೀ ಹುಚ್ಚು.
ಈ ಜ್ವರ ನಿಲ್ಲಲಿ ; ಬೇಗನೆ ಆರಲಿ
ನಾಡನು ಸುಡುತಿರುವೀ ಕಿಚ್ಚು.

ಒಂದನು ಮನ್ನಿಸು. ಇನಿಸನು ನೀಡು.
ಭಾರತಭೂಮಿಯಿದನು ಜಗಕೆ
ಬದುಕುವ ದಾರಿಯ ತೋರುವ ದೀಪ
ಸ್ತಂಭವಾಗಿರಿಸು ಬಹ ಯುಗಕೆ.

ಪ್ರಾರ್ಥನೆ

ಭರತಭೂಮಿಯ ಭಾಗ್ಯದಧಿದೈವವೇ, ಜಗವ
   ಶುಭಕೆ ನಡೆಸುತಲಿರುವ ತತ್ತ್ವವೇ, ಈ ನಮ್ಮ
   ಜನ, ಗುಂಪು ಗುಂಪಾಗಿ ಒಡೆದು, ಗುಂಪೇ ತಮ್ಮ
ದೈವವೆಂಬಂತೆ, ಈ ಜಗ ಗುಂಪಿಗೋಸುಗವೆ
ನಿರ್ಮಾಣವಾದಂತೆ, ಚೇಷ್ಟಿಸುತ ಹೇಸದಿದೆ.
   ದೇಶ ಮದುಮಗ, ದೈವ ; ತಾವು ಉತ್ಸವಕೆಂದು
   ನೆರೆದ ಬಂಧುಜನ, ಭಕ್ತಜನ; ದೇಶವ ಮುಂದು
ಎನಲಿಲ್ಲ : ಗುಂಪುಗಳ ನೆತ್ತಿಯಲಿ ಬಾಸಿಗವೆ ?

ಬಿಡಿಸು ದೈವವೆ ಜನಕೆ ಹಿಡಿದಿರುವ ಈ ಮರುಳ ;
   ಸುಲಿದು ಕಳೆ ಮನಕೆ ಮುಚ್ಚಿರುವ ಈ ಕಣ್ಪೊರೆಯ ;
      ದುರಭಿಮಾನದ ಅಧಃಕೂಪದಾಳಕೆ ಬಿದ್ದು
   ಗುರಿಗೆಟ್ಟ ಜನವ ಕೈಹಿಡಿದೆತ್ತಿ, ಮುಂಬರಿವ
ದಾರಿಯಲಿ ನಿಲಿಸು ; ದೇಶವ ಪೂಜಿಸುವ ಕರುಳ
   ನೀಡು ; ನಡೆಯಲಿ ಮುಂದಿ, ಶುಭವರಿತು, ಮೇಲೆದ್ದು.

ಚಿಲುಕಲ ನೇರ್ಪು

೧

ಕೋಲಾರ ಸೀಮೆಯಲಿ, ಚಿಕ್ಕಬಾಳಾಪುರಕೆ
    ಅತ್ತ, ಚಿಂತಾಮಣಿಗೆ ಇತ್ತಲಾಗಿ,
ಇಹುದು ಚಿಲುಕಲ ನೇರ್ಪು ಎಂಬ ಹೆಸರಿನ ಒಂದು
    ಕಿರಿಹಳ್ಳಿ....ಲೋಕಾಭಿರಾಮವಾಗಿ
ಅಂತೆನಲು ಏನೆಂದು ನೀವು ಕೇಳಲು ತೆಲುಗ
    ಬಂಧು, ಗಿಳಿಗಳ ಕಲಿವು, ಎಂದೊರೆವನು.
"ಏನು ? ಗಿಳಿಗಳ ಕಲಿವೆ ? ಅಂತೆನಲು ಏನು ?" ಎನೆ
    ಹೇಳಿಯಾನೇವನು ? ಬಾಯ್ತೆರೆಯನು.

೨

ಏನೆಂದು ಕೇಳುವರು, ಏನೆಂದು ಕಾಣದರು,
ದುರ್ಭಾಗ್ಯ ಜನ ನಾವು ಇಂದಿನವರು;
ಅನ್ನ ಹುಡುಕುತ, ಬಾಳ ಹರಹ ನೋಡಲು ಬರದೆ,
ಕಣ್ಣು ಮನ ಮುಚ್ಚಿರುವ ಸಂದಿನವರು.
ಊರ ಆ ಹೆಸರಿಂದ ಕರೆದ ಮುತ್ತಾತದಿರ
ಮುತ್ತಾತನವರದು ಅದೆಂಥ ಮನಸು,
ಇದನು ಅರಿವುದು ಒಳಿತು ನಮಗೆ, ತಿಳಿವುದು ಒಳಿತು,
ಇಂದಿಗಂದಿನ ಜನದ ಮನದ ದಿನಸು.

೩

ಊರು; ಊರಿನ ಬದಿಗೆ ಹೊಲದ ನೆಲ; ಮಧ್ಯದಲಿ
ಕೊಳ; ಬದಿಗೆ ತೋಪು; ಕೆರೆ, ಆಚೆ ಮಾಳ;
ಅದರಾಚೆ ನೆರೆಯೂರು; ಅದರಾಚೆ ಎಲ್ಲ ಜಗ.
ಕೇಂದ್ರದಲಿ ಬಾಳಿದರು ಅವರು ಬಾಳ.
ಊರಿನಲಿ ಜನ ಎಂತು, ನೀರಿನಲಿ ಮೀನಂತು,
ಬಾಳಿದವು ತೋಪಿನಲಿ ಹಕ್ಕಿ ಅಂತು;
ಏಕೆ ಬಂದಿಹವೊ ಲೋಕಕೆ, ಯಾರು ಬಲ್ಲರು?
ಬಾಳ ನಡೆಸಿವೆ ಎಲ್ಲ ಜೀವ ಜಂತು.

೪

ಆವುಗಳಲಿ ಈ ಜನಕೆ ಗಿಳಿ ಹಿಂಡು ಬಹು ಮುಖ್ಯ,
ಬಹಳ ಸುಂದರ, ಎಂದು ಕಂಡಿತಹುದು.
ಆಗಸದಿ ಮಾಲೆ ಹಾರುತ ಚಿಲುಕು ಚಿಲುಕೆಂದು
ಉಲಿದು, ಮಾವಿನ ಹಣ್ಣ ಉಂಡು ಸವಿದು,
ಕೊನೆಯ ಮಾವಿನ ಮರದ ತಣ್ಣ ನೆಳಲಿಗೆ ಎರಗಿ
ಹಿರಿಯ ಗಿಳಿ ಇಲ್ಲಿ, ಮರಿಗಿಳಿ ಸುತ್ತಲೂ
ಕುಳಿತು, ಚಿಲ್‌ಚಿಲುಚಿಲುಕು, ಚಿಲುಕು, ಚಿಲು, ಚಿಲ್ ಎನುತ
ಸಂಚಿನಿಂಚರದಿಂದ ದನಿ ಎತ್ತಲು:
ಊರಿನಲಿ ಕೆಲಸದಲಿ; ದಾರಿಯಲಿ ನಡೆಯಲ್ಲಿ;
ಹೊಲ ನೆಲನ ಗೇಮೆಯಲಿ; ಕೆರೆ ಬಾವಿಯ
ನೀರ ನೆಲದಲಿ ಹರಿಸಿ ತೋಟ ತುಡಿಕೆಗೆ ಕುಡಿಸಿ
ಭೂದೇವಿ ಈ ತಾಯಿ ಸಿರಿದೇವಿಯ
ಇಹದ ಅವತಾರ ದಿಟ ಎಂದು ಸಾಧಿಸುವಲ್ಲಿ;
ಮಾಳದಲಿ ಕುರಿ ದನವ ಕಾಯುವಲ್ಲಿ ;
ಹೂ ತೊಳಸಿ ತಿರಿವಲ್ಲಿ, ಮಿಡಿದೋರೆಕಾಯ್ ಹಣ್ಣ
ಹದ ನೋಡಿ ಜಾಣಾಗಿ ಆಯುವಲ್ಲಿ:
ಹೆಣ್ಗಂಡು, ಎಳೆಯ ಜನ, ಹರೆಯ ಮುಪ್ಪಿನ ಮಂದಿ,
ಕೇಳಿ, ಕಿವಿ ತಣಿದು, ದಣಿವಳಿದು, ನಲಿದು,
ಹಿರಿಯಗಿಳಿ ಮರಿಗಿಳಿಗೆ ಉಲಿವ ಪರಿ ಕಲಿಸುತಿದೆ
ಎಂದು ಸಂತಸ ನುಡಿದರಹುದು ಒಲಿದು.

೫

ಆಗಸದಿ ಹಾರಿ ಬರುವಂದು, ಊರಲಿ ನೀರೆ
ಹಾಡುತಿಹಪರಿ ; ಹೊಲದ ಗೇಮೆಗಾರ
ತನ್ನ ಗೇಮೆಯ ನಡುವೆ ಸಂತಸದಿ ಎತ್ತಿದ್ದ
ಗಂಡುದನಿ ; ಏತದಲಿ ಬಾವಿ ನೀರ
ಮೇಲಕೆತ್ತುತ ದಣಿವು ತಿಳಿಯದಂದಕೆ ನೀಳ
ಎಳೆದ ಹಾಡಿನ ರೀತಿ ; ಈ ಪೈರಿಗೆ
ಇಳಿಯದಿರ ಎಂದು ಸೋವಿದ ಎಳೆಯ ಚೆಲುವೆಯರ
ಭಯ ಮೂಡಿಸಿದ ಬಳೆಯ ಕೈವಾರಿಕೆ :
ಇನ್ನಿಂಥ ನೂರು ಸುಂದರ ಸುಸ್ವರವ ನೆನೆದು
ಹಿರಿಯಗಿಳಿ ತಾವಂತು ನುಡಿಯಲೆಂದು
ತೊಡಗಿದವು ; ಬಯಸಿದವು, ಮರಿ ಅಂತು ನುಡಿಯಲಿ,
ಇಂಚರನ ಬಹುಪರಿಯ ಪಡೆಯಲೆಂದು.

೬

ಕೊನೆಯ ಮಾವಿನ ಮರದ ನಿಡಿದು ನೆರಳಲಿ ಕುಳಿತು
ಚಿಲುಕೆಂದು ಹಿರಿಯಗಿಳಿ, ಚಿಲುಚಿಲೆಂದು
ಕಿರಿಯಗಿಳಿ, ಉಲಿಯುತಿರೆ, ಅದ ನೋಡಿ ತಾತದಿರು
ನೆನೆದರಿದು ಗಿಳಿಗಳಿಗೆ ಸಾಲೆಯೆಂದು.

೭

ಅದರಿಂದ ಊರು ಚಿಲುಕಲ ನೇರ್ಪು ಆಯಿತು.
ಈಗಳೂ ಗಿಳಿಗಳಿಗೆ ಅದು ಸಾಲೆಯೆ.
ಮನ ಮಾತ್ರ ಮಾಡಿದೆವೆ, ಈ ಊರು, ಈ ನಾಡು,
ಅಂದೆಂತು ಅಂತಾಗುವುವು ನಾಳೆಯೆ.

೮

"ಕಾಲ ಕೆಟ್ಟಿದೆ. ಬಾಳು ಅಂದೆಂತು, ಅಂತಿಂದು
ಚೆನ್ನವಾಗುವುದೆಂತು, ಇದು ಅಸಾಧ್ಯ,"
ಎನ್ನುವಿರ ? ಎನಿತು ಮಹ, ಎನಿತು ಲಯ ಆದರೆಯು
ಅಮವಾಸೆ ಆಚೆಗಿದೆ ಶುಕ್ಲಪಾಡ್ಯ.

೯

ಮುಪ್ಪು ಕಡೆ ನಡೆಯುತಿಹ ಗಿಳಿ ಅರಿಕೆಮಾಡುವೆನು :
ಮರಿಗಿಳಿಗಳೆಲ್ಲ, ಕಿವಿಗೊಡಿ ಲಾಲಿಸಿ ;
ಅರಗಿಳಿಯೊ ಮರಗಿಳಿಯೊ, ಅದು ನಿಮ್ಮ ಅಳವಲ್ಲ;
ಎಂತೊ, ಗಿಳಿಯೆಂಬ ಧರ್ಮವ ಪಾಲಿಸಿ,
ಶುಭವನೇ ನಾಡಿ, ಶುಭವನು ಹಾಡಿ, ಶುಭವನೇ
ಮಾಡಿ, ನಾಡನು ಶುಭದ ಸಾಲೆಯೆನಿಸಿ;
ಇಲ್ಲಿಂದ ಎಲ್ಲೆಡೆಗೆ ಹರಿವ ಸುಖ ಹೆಸರಾಗಿ
ನೆಲೆ ನಿಲಲಿ ಈ ನಾಡ ಮೇಲೆ ಘಸಿಸಿ.

ಸೌಭಾಗ್ಯ ದರ್ಶನ

೧

"ಸೌಭಾಗ್ಯ ದರ್ಶನವೆ ? ಹಾಗೆಂದರೇನರ್ಥ ?"
ಎಂದು ನಾ ಗೆಳೆಯರನು ಕೇಳೆ,
ಅವರು ಹೇಳಿದರು : "ಕಿರಿಯರು ಇಂದು ಬಾಳಿನಲಿ
ಬೇಸರವೆ ಹೆಚ್ಚೆಂಬ ವೇಳೆ,
ಅರವತ್ತು ವರುಷಕೂ ಮೇಲ್ಪಟ್ಟು ಕಷ್ಟ ಸುಖ
ಎರಡನೂ ಕಂಡುಂಡು ಬಲ್ಲ
ಹಿರಿಯ ಜನ ಯಾವುದೋ ಶುಭದ ದರ್ಶನ ಪಡೆದು
ಜಗದೆದುರು ನಗುತಿರುವಿರಲ್ಲ.
ಇದರ ಗುಟ್ಟೇನು ತಿಳಿಸುವಿರ ?" "ಓಹೋ, ಅಗತ್ಯ,
ತಿಳಿಸುವೆನು," ಎಂದೆ ನಾನದಕೆ.
ಹಿರಿಯರೊಬ್ಬರ ಮಾತ ಹೇಳಿ ತಿಳಿಸುವೆ ಗುಟ್ಟ;
ಇದಕೆ ಮೀಸಲು ನನ್ನ ಬದುಕೇ.

೨

ಅಜ್ಜ ಶಾಮಣ್ಣನವರಿಗೆ ನೈಯಲಸ್ವಸ್ಥ ;
ಪಂಚಾಂಗದಲಿ ಅಂದು ಹಬ್ಬ.
"ಸ್ವಲ್ಪ ಪಾಯಸ ಮಾಡು," ಎಂದಜ್ಜ ಹೇಳಿದರು.
ಅಜ್ಜಿ "ಪಾಯಸವೆ? ಅಬ್ಬಬ್ಬ!
ಜ್ವರಕೆ ಪಾಯಸ ಮದ್ದೆ? ಇರಲಿ," ಎಂದರು. ಅಜ್ಜ:
"ನೈವೇದ್ಯಕಿರಬೇಡವೇನು ?"
"ನೈವೇದ್ಯಕೇನಂತೆ, ಹಾಲಿಟ್ಟರಾಯಿತು."
"ಛೆ, ಛೆ, ಇದು ಏತರದು ಜಾಣು ?
ನಾನುಂಟೊ ದೇವರುಂಟೋ ಎನ್ನುವರೆ ? ಎಲ್ಲ
ಮನೆಯಂತೆ ನಮ್ಮ ಮನೆಯಲ್ಲೂ
ಇರಬೇಕು ಪಾಯಸ. ಇಲ್ಲ; ನೀ ದೇವರು
ಎನುತಿಹುದು ಬರಿ ಮಾತು, ಸುಳ್ಳು."

೩

ಮಧ್ಯಾಹ್ನ ನಾ ಹೋದೆ. "ಶೀನಪ್ಪ ಬಂದ, ಇಕೋ;
ಪಾಯಸವ ಕೊಡುವೆಯಾ ಇಷ್ಟು ?"
ಎಂದು ಕೂಗಿದರಜ್ಜ. ಅಜ್ಜಿ ಬಟ್ಟಲು ತುಂಬ
ಪಾಯಸವ ತುಂಬಿ ತಂದಿಟ್ಟು,
"ನೀನಾದರೂ ಬಂದೆಯಲ್ಲ. ಮಾಡಿದುದೆಲ್ಲ
ಹಾಗೆಯೇ ಇದೆ. ಬೇಡವೆಂದೆ.
ಕೇಳಬೇಕಲ್ಲ. ಹಟ ಮಾಡಿದರು, ಮಾಡಿಟೆ,
ಇಟ್ಟೆ", ಎಂದರು ಅವರು ನೊಂದೇ.
ಅಷ್ಟರಲಿ ಮನೆಯಾಳು ಬಂದ. ಆವನಿಗೆ ಅಷ್ಟು,
ಇನ್ನಷ್ಟು ಅವನ ಮನೆ ಜನಕೆ,
ನನ್ನ ಮನೆಗಿಷ್ಟು, ಪಾಯಸವ ಹಂಚಿಸಿ ಅಜ್ಜ
ಹರ್ಷ ತಂದರು ತಮ್ಮ ಮನಕೆ.

೪

ಜ್ವರಬಿಟ್ಟ ಮೇಲೆ ಅಜ್ಜನನು, ಅಜ್ಜಮ್ಮನಿಗೆ
ಹಿಲ್ಲದಿಹ ಹಬ್ಬವನು ಏಕೆ
ಮಾಡಿಸಿದಿರೆಂದು ನಾ ಕೇಳೆ ಅವರೆಂದರು :
"ಜ್ವರ ನನಗೆ ಈ ದಿವಸ, ಜೋಕೆ,
ಯಾರಾದರೂ ಹಬ್ಬ ಮಾಡೀರಿ, ಎನ್ನುವುದು
ಸರಿಯಹುದೆ ಮಾತು, ಶೀನಪ್ಪ ?
ಮನೆ ದೇವರದು ; ನಾವು ಅವನಿಟ್ಟಿರುವ ಆಳು ;
ಎಲ್ಲ ಮನೆಯಲು ಅವನು ಬೊಪ್ಪ."
"ಮಗನ ಕಷ್ಟದ ಹೊತ್ತು ಬೊಪ್ಪನಿಗೆ ಪಾಯಸ
ಬೇಕೆನಿಸಬಹುದೆ ?" "ಅಣ್ಣಯ್ಯ,
ಅರ್ಥವ ಅಪಾರ್ಥಮಾಡುವ ಇಂಥ ಚದುರು ನುಡಿ
ಚದುರೆಷ್ಟು ಅಷ್ಟು ದುರ್ನ್ಯಾಯ."

೫

"ಬೊಪ್ಪ ಮಾತ್ರವೆ ದೈವ ? ಎಲ್ಲವೂ ದೈವವೇ.
ಸರ್ವಂ ಇದಂ ಖಲು ಬ್ರಹ್ಮ.
ಜಗದ ಜೀವನ ಒಂದು, ಅದ ಬಾಳುತಿದೆ ದೈವ.
ಇದನರಿತವರು ತಮ್ಮ ತಮ್ಮ
ಕಷ್ಟವನು ನಾನೆಂಬ ಭೂತ ಕನ್ನಡಿಯಿಂದ
ಹಿರಿದು ಹಿಗ್ಗಿಸಿ ನೋಡರಲ್ಲ ?
ಲೋಕ ಅಶ್ವತ್ಥ; ಅದರಲಿ ನಾನು ನೀನು ಎಲೆ:
ಚಿಗುರಿ ನಲಿಯುತ ಬತ್ತಿ ಉದುರಿ
ಮರೆಯಾಗುವನು ಮನುಜ. ನಲಿಯುವಷ್ಟೂ ನಲಿವ;
ಗೋಳಿಡುವರೇ ಮರುಗಿ ಮುದುರಿ ?

೬

"ಕಷ್ಟವಿದೆ ಬಾಳಿನಲಿ; ಕಷ್ಟಕೂ ಮಿಗಿಲಾಗಿ
ಇಹುದಲ್ಲ ಯಾವುದೋ ಸೌಖ್ಯ.
ಕತ್ತಲಿದೆ ಲೋಕದಲಿ; ಅದನು ಜಯಿಸಲು ಬೆಳಕು
ಒತ್ತಿಲಿದೆ; ಇದ ಮರೆಯೆ ಮೌರ್ಖ್ಯ.
ಅದು ಏಕೆ ಇರಬೇಕು ಎನ್ನದಿರು; ಕೆಸರಲ್ಲಿ
ಕಮಲ; ಗೊಬ್ಬರದಲ್ಲಿ ಹಣ್ಣು;
ಈ ಅಕ್ಕಿ ಬಿಕ್ಕಿಯಲಿ ಬಹು ಕಲಿಮೆ ದೈವಕ್ಕೆ;
ಅರಿಯದಿಹುದಿದ ನರನ ಕಣ್ಣು.
ಕಷ್ಟವಿರುವುದರಿಂದ ಸಹನೆ ಬೇಕಾಗಿದೆ;
ಮೂಡಿ ಬಂದಿದೆ ಸೇವೆ, ಮರುಕ.
ಅದು ಬೇಡ? ಇವು ಇಲ್ಲ. ಆತ್ಮಕಿವು ಬೇಡವೆ?
ಬೇಡವೆಂಬನು ಬುರುಡೆ ತಿರುಕ.

೭

"ಕಲ್ಲು ಸರಿ; ನೀರು ಸರಿ; ಕಲ್ಲಿಗಿಂತಲು ಹೆಚ್ಚು
ನೀರೆಸಲು ಸರಿ, ಆಲಿಕಲ್ಲು.
ದೇವರಿಗೆ ಕರುಣೆ ಇಲ್ಲೆಂಬ ಜನ ಕಾಣೆವು,
ಕರುಣಾರ್ದ್ರ ಹೃದಯದೀ ಜೊಲ್ಲು
ಅವನಿಂದಲೇ ಬಂದುದೆಂಬುದನು. ಹಿರಿಶೆಟ್ಟಿ
ಬೆಳೆದ ಮಗನಿಗೆ, 'ಇನ್ನು ನೀನೇ
ಅಂಗಡಿಯ ನೋಡಿಕೋ, ನಾನಿಲ್ಲ,' ಎಂದಂತೆ,
ದೈವ ಪಕ್ಕಕೆ ಸರಿದು ತಾನೇ
ತಿಳಿದ ಮಕ್ಕಳ ಕೈಲಿ ಬೈಸಿಕೊಳ್ಳುತಲಿಹನು.
ಅವನಿಲ್ಲವೋ ಎಂಬ ರೀತಿ
ಈ ಜಗವ ಚೆನ್ನಮಾಡಲು ತೊಡಗಿ ಬಲ್ಲ ಜನ
ದುಡಿವುದವನಿಗೆ ಪರಮ ಪ್ರೀತಿ.

೮

“ನನಗೆ ಪಾಯಸ ಸಲ್ಲ; ಗಂಡ ತಿನ್ನನು ಎಂದು
ಅಜ್ಜಿ ಬಲ್ಲಳು; ಉಂಡೆ ನೀನು.
ಮನೆಯಾಳು, ಮಡದಿ, ಮಕ್ಕಳು, ಉಂಡರಲ್ಲವೆ?
ಜ್ವರವಿಲ್ಲ; ಕೊಡುತಿದ್ದೆವೇನು?
ಪರತುಷ್ಟಿಯಲಿ ನಮ್ಮ ತುಷ್ಟಿಯನು ಕಾಣುವುದ
ಕಲಿತೆವೇ ಬದುಕೆಲ್ಲ ಸೇಸೆ.
ತಳಿರು ಹೂ ಆಗುವುದು ನೆಲ ನೀರು ಬಾನ್ ಬಳ್ಳಿ
ಒಳಗೆ ತಳೆದಿಹ ಚೆಲುವಿನಾಸೆ.
ಒಳ್ಳೆ ಜನ ಕಾಂಬ ನಲುಗನಸೆಲ್ಲ ಸೃಷ್ಟಿಯದು
ನಿನ್ನೆದೆಯೊಳಿದಕೆ ಎಡೆ ನೀಡು;
ಮೈ ಮುರಿದು ಒಳ್ಳಿತ ಸದಾ ಮಾಡು; ಮನದಲ್ಲಿ
ನೋವುದಕೆ ಬಿಡುವಿಹುದೆ ನೋಡು.

೯

“ದೇವರುಂಟೇ ಎಂದು ಕೇಳುವರು. ಇಹರೆಂಬೆ.
ಇವರು ದೇವರು ಎಂಬ ಒಡವೆ
ಎಂಥದೋ ಕಾಣೆ; ಅದು ನನಗೆ ನಿಲುಕದ ಪ್ರಶ್ನೆ:
ಬೇಡ ಈ ಬುದ್ಧಿಗಾಗೊಡವೆ.
ಅನುಭವವ ಹೇಳುವೆನೆ, ಹೆತ್ತ ತಾಯ್ತಂದೆವಿರ,
ಹೊರೆದ ಬಳಗದ, ನಾವೆ ಹೆತ್ತು
ಹಿಡಿದ ಮಕ್ಕಳ, ಕೆಳೆಯ, ಒಡಹುಟ್ಟ ಕೃಪೆ ಒಲವು,
ಇದು ಎಷ್ಟು ಎಂದು ಬೇಸತ್ತು
ಕೊಡವಿಕೊಂಡರು ಬಿಡದ ಹೆಂಡತಿಯ ವಾತ್ಸಲ್ಯ:
ಇವು ನನಗೆ ಪ್ರತ್ಯಕ್ಷ ದೈವ.
ಈ ಒಲವು ಕರುಣೆಯಲಿ ಜಗದ ಬೇರಿನ ಒಲವು
ಕರುಣೆಯನು ಉಣುತಿಹುದು ಜೀವ.”

೧೦

“ಇಹಲೋಕದಲಿ ನಾಕವಿದೆ; ಅದನು ಹೊರಗೆ ತೆಗೆ;
ಇದೆ ಕೆಲಸ,” ಎನ್ನುತಿಹರಜ್ಞ.
“ದೇವರುಂಟೆಂಬರಿಗು ಮಿಗಿಲು ಇದು, ಇಲ್ಲೆಂಬ
ಮಂದಿಯನು ಕಾದಿರುವ ಕಜ್ಜ.
ತಿಳಿದು ದುಡಿಯದ ಜಾಣ, ಕಸ ಹೆಚ್ಚಿತೇ, ಎಂದು
ಮರುಗಿ ಮೂಲೆಯ ಹಿಡಿದ ಪರಕೆ.
ಜೊತೆಗೆಂದು ಕಾಯುವುದು,ನಾಯಕನ ಬಯಸುವುದು,
ಇದು ಕೂಡ ಬುದ್ಧಿಯಲಿ ಮುರುಕೇ.
ಸೂರ್ಯ ಬೆಳಗಲಿ ಬಿಡಲಿ, ಬಿಡದೆ ಬೆಳಗುವ ತಾರೆ
ಸೃಷ್ಟಿ ಹಾಡಿದ ಮಹಾವಾಕ್ಯ :
‘ಒಳಹೊರಗಿನೊಳ್ಳಿತನು ತೆರೆ, ಬೆಳಸು, ಚೆಲ್ಲು; ಇದೆ
ಜನ್ಮ ಸಾಫಲ್ಯ, ಸೌಭಾಗ್ಯ.’ ”

ಬಾನುಲಿ

೧

ಭರತವರ್ಷದ ಮೊತ್ತ ಮೊದಲ ಬಾನುಲಿ ತಾಣ
        ಮೈಸೂರೊಳಾದುದಂದು.
ಲೋಕ ಕಲ್ಯಾಣವನು ಸಾಧಿಸುವ ನಾದಬಿಂದು,—
        ಅದುವೆ ಓಂ ಪ್ರಣವ ಉದ್ಗೀಥ,
ಸರ್ವಲೋಕ ವ್ಯಾಪಿ, ಇಂದ್ರಿಯಾತೀತ,
        ಕಾರುಣ್ಯ ಸಿಂಧು :
        ಇಂತಪ್ಪ ನಾದಬಿಂದು,—
ಕೌತುಕ ಪ್ರೇಮಿ ಗೋಪಾಲಸಾಮಿಯ ಜಾಣ
        ತಲೆಯ ಒಳಗಡೆಯ ಸಾರಿ,
        ಮತ್ಸ್ಯರೂಪದ ವಿಷ್ಣು ಅಂದೆಂತು ಅಂತುಮೀರಿ,
ತಾನು ಬಾಳಲು ಒಂದು ಮನೆಯ ಮಾಡಿಸಿಕೊಂಡು
        ನೆಲೆಸಿತೀ ನಾಡಿನಲಿ.

ಬಲ್ಲ ಜನ ಹೆಣ್ಣು ಗಂಡು,
ಹತ್ತಾಗಿ ನೂರಾಗಿ ಸನ್ನಿಧಿಯ ಸೇರಿ,
ಆಟವಲಿ ಪಾಟದಲಿ ಮಾತಿನಲಿ ಹಾಡಿನಲಿ,
ತನ್ನ ಕೈಯಿಂದಾದ ಸೇವೆಯನು ಸಲಿಸಿತು ;
ಜನತೆಯನು ನಲಿಸಿತು;
ತನಗೆ ತಿಳಿದುದನು ತಿಳಿಯದ ಜನಕೆ ಕಲಿಸಿತು ;
ವಾಣಿ ವೀಣಾಪಾಣಿ
ವರದೆ ಬೊಮ್ಮನ ರಾಣಿ
ಸರಸತಿಗೆ ಇದ ಒಂದು ನೆಲೆ ಎಂದು ನಿಲಿಸಿತು.

೨

ಎಲ್ಲಿಯೋ ಕಾಡಿನಲಿ,
ಗೋವು ಹುತ್ತದ ಮೇಲೆ
ಪಾಲ ಕರೆದಭಿಷೇಕ ಮಾಡುವುದ ಕಂಡು,
ಗೋವಳರು ಹೇಳೆ,
ಅವರೆಳೆದ ಜಾಡಿನಲಿ
ನಾಡರಸು ಓಡಿಬಂದು,
ಮಹಿಮೆಯೆಡೆಯೆಂದರಿತು ಗುಡಿಯ ಕಟ್ಟುವ ಚಂದ,
ಮೈಸೂರಿನಾಡಳಿತ, ಬಾನುಲಿ ಇರವ ಕಂಡು,
ಅದರ ಹರಿಬವನು ಕೈಗೊಂಡು,
ನಾಡ ಆಕಾಶವಾಣಿ ಎಂಬ ಹೆಸರಿಂದ
ಅದ ನೆಲೆಸಲೆಂದು ಮಂದಿರವೊಂದ ಕಟ್ಟಿಸಿ,
ನೋಡುವರು ನಿಟ್ಟಿಸಿ
ನಲಿವಂತೆ ಅದರ ಚೆಲುವನು ಬೆಳೆಸಿ ತುಂಬಿತು.

ಇಂತು ಮೈಸೂರಿನುದ್ಯಾನಗಳ ಮಡಲಿನಲಿ
ಪುಷ್ಟಿಯನು ಪಡೆದ ಆ ಬಾನುಲಿಯ ತಾಣ,
ಕಿರಿಯೂರ ಇಂಬಿದು
ತನಗಿನ್ನು ಸಾಲದೆಂದಿತೊ ಎಂಬ ತೆರದಿ,
ನದಿಯ ಹೊಲಬಲಿ ಬೆಳೆದ ಮೀನು ಕಡಲಿನಲಿ
ಹರಹನರಸುವವೊಲೀ ಕಲ್ಯಾಣಪುರದಿ
ವಿಸ್ತರದ ಗೆಯ್ಮೆಯನು ಬಯಸಿ ಬಂದಿಹುದು;
ಬೆಂಗಳೂರಿನ ಬಹಳ ಸೌಭಾಗ್ಯವೆಂಬುದು
ಹೆಚ್ಚುವಂದದ ಹೊಸತು ಸಿರಿಯ ತಂದಿಹುದು ;
ಇಂದು ಮೊದಲಿಲ್ಲಿಂದ ಕತೆ ಗಾನ ವಿಜ್ಞಾನ
ಆಟ ಹರಿಕಥೆ ಪುರಾಣ
ಸವಿ ಕಟ್ಟಿ ಬಿತ್ತರಿಸಿ ನಡೆಯತೊಡಗಿಹುದು.
ಆದರಿಂದ ಇಂದಿನಿತು ನಲಿಯುತಿದೆ ನಗರ;
ಇನಿತೆಮ್ಮ ಸಂಭ್ರಮ, ಇನಿತೀ ಸಡಗರ.

೩

ಬಾನುಲಿಯೆ ? ಆಕಾಶವಾಣಿಯೆ ? ಪೂರ್ವಿಕರು,
ನಾಡ ಹೆಮ್ಮೆಯ ಗುಡಿಯ ಶಿಲ್ಪಿಗಳು, ಧಾರ್ಮಿಕರು,
ಆಕಾಶವಾಣಿ, ಅಶರೀರವಾಕ್, ಎಂದರಾ
ಕಾಲದಲಿ, ಮಾನವ ವ್ಯವಹಾರ ಇಬ್ಬಂದಿ
ಸಂಧಿಯಲಿ ತೊಡಕಿರಲು, ದೈವ ಅಮೃತಸ್ಯಂದಿ
ಸತ್ಯ ಶಿವ ಸುಂದರ
ಸ್ವರದಿಂದ ಇದಮಿತ್ಥಮೆಂದೊರೆದ ಸವಿಸೊಲ್ಲ.

ಈ ಹದನ ಬಲ್ಲ
ಯಾರು ಇಂದಿನ ಸಮ್ಮ, ಈ ಎರಡು ಮೊಳ ಹೆಚ್ಚು
ಮೂರು ಮೊಳ ಕಮ್ಮಿ
ಎಂಬಂಥ ಮಾತ ನೆಮ್ಮಿ,
ಅವಕೆ ಈ ಹೆಸರ ಕೊಡುವರು ? ಏನು ಹುಚ್ಚು ?
ಆಕಾಶವಾಣಿ ? ಛಿ ! ದಾಶರಥಿ ರಾಮನ
ಪುಣ್ಯ ನಾಮವನು ಮನೆ ಮನೆ ಇಚ್ಚ ಮಾನುಸ
ಹೆಸರು ಮಾಡಿದ ರೀತಿ, ಅಂದಿನಾ ವೈಭವದ
ಹಿರಿ ಹೆಸರ ಹಿಡಿವೆತ್ತಿ, ಇಂದಿನೀ ಕೈತವದ
ಯಂತ್ರಗಳ ತಂತ್ರಕಿಡೆ ಅದು ಇದಕೆ ಸಲ್ಲುವುದೆ ?
ಹೆಸರನಿಟ್ಟವರ ಮರ್ಯಾದೆ ನಿಲ್ಲುವುದೆ ?
ಈ ಕೃತ್ಯ ಸಲ್ಲ, ಹೊಲ್ಲ,
ಎಂದೆ ತೋರುವುದು : ಅಲ್ಲ ?

೮

ದಿಟ, ನನ್ನ ಬಂಧುಗಳೆ; ಈ ಶಂಕೆಗೆಡೆಯಿದೆ.
ಆದರಿನ್ನೊಮ್ಮೆ ಆರಯಿಸಿ ನೋಡಿರಿ. ಎಲ್ಲ
ವಾಣಿ ಆಕಾಶವಾಣಿಯೆ ; ದೈವ ನುಡಿಯದೆ.
ಮನುಜನಿಗೆ ನುಡಿ ಇಲ್ಲ.
ನುಡಿವುದೀ ಒಡಲಲ್ಲವಲ್ಲ :
ಜಡ ನುಡಿಯೆ ಕಾಣದು.
ಹಿರಿಯರೆಂದರು ; ಒಡಲ ಮುಚ್ಚಿರುವ ನಾನಿದು,
ಚೇತನದ ಸೂಕ್ಷ್ಮ ಸಂವಿತ್ ಶೂನ್ಯದಡಿಯಿಂದ
ಬಾಳಿನಧಿದೈವ
ನೀಡುತಿಹ ಭಾವವನು ಒಳಗಿಂದ ಸೇದಿ
ಹೊರಗೆ ಚೆಲ್ಲುವುದು ; ನುಡಿ ಜೀವಾಳವಾದಿ.

ನೋಡೆ ಸ್ವತ ಏವ
ನುಡಿಯಬಲ್ಲದು ದೈವ ಒಂದೆ, ಇನ್ನೊಂದಿಲ್ಲ.
ಉಲಿವ ಉಲಿ ಎಲ್ಲ
ನುಡಿವ ಜೀವದ ಅಂತರಂಗದಿಂದೂರಿ
ಎದೆಯ ಆಕಾಶದಲಿ ಹುಟ್ಟಿ
ಎಡೆಯ ಆಕಾಶವನು ದಾಟಿ
ಕೇಳುವೆದೆಯಾಗಸವ ಮುಟ್ಟಿ
ಎದುರು ಜೀವದ ಅಂತರಂಗವನು ಸಾರಿ
ಫಲಿಸುವುದು: ಅರಿಯೆ ಇದು ಆಕಾಶವಾಣಿ.
ಒಡಲಿಂದಲೇ ಬರಲಿ, ಯಂತ್ರದಿಂದಲೆ ಬರಲಿ,
ಎಲ್ಲ ನುಡಿ ಅಶರೀರ, ಕಾಣಿ.
ಇಂತು, ನಾವಿಂದು ಯಂತ್ರದಲಿ ನುಡಿಯುವ ಥಾಟಿ
ಪೂರ್ವದಾಕಾಶವಾಣಿಗೆ ತೀರ ಸರಿಸಾಟಿ.
ಆರಯಿಸೆ ಅರಿವಿರಿ:
ನುಡಿಯೆಲ್ಲ ವೈಖರಿ;
ಎಲ್ಲ ವಾಣಿಯು ಸರಸ್ವತಿಯೆ ಕಲ್ಯಾಣಿ ;
ಎಲ್ಲ ನುಡಿಯೂ ದಿವ್ಯ, ಆಕಾಶವಾಣಿ.

೫

ಆದರಿಂದಲೇ ವೇದ, "ಪುರುಷಸ್ಯ ವಾಗ್ರಸಃ"
ಎಂದು ವಾಕ್ಶಕ್ತಿಯೌನ್ನತ್ಯವನು ಸಾರಿತು.
ಅಸುರರದ ಚುಚ್ಚಿ ಅದರಮೃತ ರಸವನು ವಿಷವ
ಮಾಡಿ ಕೆಡಿಸಿದರಂತೆ ; ಜನ ನುಡಿಯ ದೂರಿತು.
ಆಸುರ ಕೆಡಿಸದೆ ಮಾತು ಕೆಡಬಹುದು ಎಂತು ?
ಆಸುರದೆ ಹೊಂತು
ಎನಿತೊ ಚೆನ್ನೆನಿಸಿದ್ದ ನಮ್ಮ ಈ ನಾಡ
ವಾಣಿಯನು ಭಂಗಿಸಿದೆ : ಕಾಣಿರಾ ಪಾಡ ?

ಹೊಲದ ದಾರಿಯಲಿ ಗೊಬ್ಬರದ ಬಂಡಿಯ ಹುಡುಗ–
ಬಹಳ ಬಲ್ಲವನೆ ? ತುಡುಗ,–
“ತನು ನಿನ್ನದಯ್ಯ ಜೀವನು ನಿನ್ನದು,”
“ತಲ್ಲಣಿಸದಿರು ಕಂಡ್ಯ ತಾಳು ಮನವೇ,”
ಎಂದು ಹಾಡಿದ ಹದನ ಕಂಡೆನ್ನ ಕಣ್ಣಿದು,
ಇಂದು ನೋಡುತಿದೆ, ಅಣ್ಣ್ಯೆನ್ಮ ದೇವರ ತಂದು,
ಅವಳ ಕೃಪೆಯನು ಕೋರುತಿಹ ಭಕ್ತ ಜನವೇ
“ಡಡಡಾ ಡಡಡಾ ಡಡಡಾ ಡಡಡಾ
ಡಡಡಾ ಡಡಡಾ ಡಡ” ಎಂದು–
ಈ ಹಾಡು ಒಳಿತಲ್ಲ ಎಂದಲ್ಲ ಅಣ್ಣ,
ಆವೇಳೆ ಆ ಸ್ಥಳಕೆ ಅದು ಇನಿತು ಸಣ್ಣ,–
ಚಲನಚಿತ್ರದ ಗಾನದಿಂದ ದಿಕ್ತಟವ ತುಂಬಿ
ದೇವಿ ಮೆಚ್ಚಿರಲೆ ಬೇಕೆಂದು ನಂಬಿ
ವರವ ಬೇಡುವ ಹದನ. ಮೆಚ್ಚಳೇ ? ಏಕೆ ತಡ ?
“ತಾಯಿ ವರವನು ಕೊಡಾ ;
ಕೊಡೆಯ, ಹಾಡಿನ ಕಡ
ನಿನ್ನ ಮೇಲಿದೆ, ಜೋಕೆ !” ಎಲ ಹುಚ್ಚುತನವೇ !
ಓ ನನ್ನ ಜನವೇ !
ಬಾಳಿಂದ ಮರೆದ ಗಾಂಭೀರ್ಯವೇ ! ಘನವೇ !

೬

ಅಂತಿದ್ದ ಈ ಜನತೆ ಇಂತಾಯಿತೇ ಎಂದು
ನನ್ನ ಮನ ಅಳಲಿಂದ ತುಂಬುತಿದೆ, ಬಂಧು.
ಮಾತು ಹದ ಮೀರಿತೇ ? ಮನ್ನಿಸಿರಿ ಒಡಹುಟ್ಟು;
ಅಸುರ ಚುಚ್ಚಿದನು ; ಇದು ಕೆಟ್ಟುದರ ಗುಟ್ಟು.

ಇರಲಿ ಆ ಕಥೆ.   ಈಗ ನಾವೆಲ್ಲ ಸೇರಿ
ಗೆಯ್ವ ಈ ಕಾರ್ಯ, ಅಸುರ ಗೆದ್ದ ಜಯಭೇರಿ
ಕೇಳಿಸುವ ಮುನ್ನ ಅದ ಬಡಿದು ಅಟ್ಟುವುದು :
ದಿವ್ಯವಾಣಿಗೆ ಒಂದು ಆಲಯವ ಕಟ್ಟುವುದು ;
ಕಟ್ಟುವುದೆ ? ಅಲ್ಲ, ಕಟ್ಟಲು ಮನವಮಾಡುವುದು;
ದೈವವನು ಅದಕೆ ಬಲನೀಡೆಂದು ಬೇಡುವುದು.
ಕಟ್ಟುವುದು ಇನ್ನೇನು ? ಕಟ್ಟೆ ಆಗಿದೆಯಲ್ಲ
        ಎನಲು ಸಲ್ಲ :
ಕಲ್ಲು ಇಟ್ಟಿಗೆ ಗಾರೆ ಅಂಟು ಕಬ್ಬಿಣದಿಂದ
        ನಿರ್ಮಿಸಿದ ಗೇಹ ಬಂಧ
        ಆಲಯದ ತಡಿಕೆಯಷ್ಟೇ ;
        ಆಗಬೇಕಿನ್ನಿಲ್ಲಿ ಪ್ರಾಣಪ್ರತಿಷ್ಠೆ ;
        ಅದನು ಗೆಯ್ವುದು ನಮ್ಮ ಶ್ರದ್ಧೆ, ನಿಷ್ಠೆ.

೭

        ಗೆಯ್ಮೆರಿದ ನಾಡ ಮಕ್ಕಳು ಎಲ್ಲ ; ಬನ್ನಿ;
        ವಾಣಿ ವೀಣಾಪಾಣಿ
        ವರದೆ ಕಲ್ಯಾಣಿ
ಇಲ್ಲಿ ಮಂದಿರದಿ ಸುಸ್ಥಿರ ನೆಲೆಸಲೆನ್ನಿ :
ನುಡಿ, ಗಾನ, ವಿಜ್ಞಾನ, ತತ್ವ, ಶಾಸ್ತ್ರ, ಪುರಾಣ,
        ಇವ ಬಲ್ಲ ಎಲ್ಲ ಜಾಣ
        ಬಿಡದೆ ಅನುದಿನವು ಬಂದು,
ಸಾಲು ಹರಿಯದೆ, ಸಾಲು ಸಾಲು, ಕಲಿತುದ ತಂದು
        ದೇವಿಯೆದುರಲ್ಲಿಡೆ ಇರಿಸಿ
        ಪೂಜೆಯನು ಸಲಿಸಲೆನ್ನಿ:

ದೇವಿ ಜನವನು ಹರಸಿ ಮನದ ಕತ್ತಲ ಹರಿಸಿ
ಒಳ್ಳಿದನು ಬಲಿಸಲೆನ್ನಿ ;
ಸತ್ಯ ಶಿವ ಸುಂದರಗಳೊಂದನೊಂದನುಸರಿಸಿ
ಬಾಳ್ಕೆಯನು ತಳಿಸಲೆನ್ನಿ.
ಎಲ್ಲರೂ ಬೇಡಿರಿ ; ಹಿರಿಯ ಜನ ಹರಸಿರಿ ;
ಮಂದಿರದ ತಡಿಕೆಯನು ಅದರುಸಿರು ವರಿಸಲಿ ;
ಬಾಸುಲಿಯ ತಾಣವಿದು ಜೀವಂತವಾಗಲಿ ;
ಇಂದಿನುತ್ಸವದಿಂದ ಮೊದಲಪ್ಪ ಬಾಳ್ವೆಯಿದು,
ಶಾಖೆ, ಉಪಶಾಖೆ, ಉಪ ಉಪಶಾಖೆ, ತಾಳ್ದು, ಹುದು
ಹುದುವಾಗಿ ಬೆಳೆಯಲಿ, ಎಂದಿಗೂ ಸಾಗಲಿ ;
ಎಲ್ಲರೂ ಬೇಡಿರಿ, ಹಿರಿಯ ಜನ ಹರಸಿರಿ,
ವಾಕ್ಯಕ್ತಿ ಸನ್ನಿಧಿಯ ನೀಯೆಡೆಗೆ ಬರಿಸಿರಿ,
ದೇವಿ ಈ ತಾಣವೆನಗಿರಲೆಂದು ವರಿಸಲಿ.

೮

ಈ ಕಾರ್ಯ ಸಿದ್ಧಿಸಿತೆ, ಜನತೆ ಬದುಕಿತು ದಿಟ :
ಸತ್ಯದೆದುರಿನಲಿ ನಡೆಯದು ಅಸತ್ಯದ ಹಟ.
ಚೆಲುವು ಒಳ್ಳಿತು ನನ್ನಿ ಸಾರಿದವು ಎನ್ನಿ,
ಕೊಂಕು ಹುಸಿ ಕೇಡ ಕುನ್ನಿ
ಇನ್ನಲ್ಲಿ ತುಸವೂ
ಬಾಲ ಮಿಸುಕಿಸವು.
ಬೆಳಕ ತಹದೊಂದು, ಕತ್ತಲ ಕಳೆವುದಿನ್ನೊಂದು,
ಎರಡಲ್ಲ ಕೆಲಸ ; ಒಂದೇ.
ಜ್ಞಾನವನು ತಂದೆಯಾ ? ಬಾ ಬಂಧು, ನೀ ಇಂದೆ
ಅಜ್ಞತೆಯ ಕಳೆದೆ ತಂದೇ.
ಇಂತಿದನು ಮಾಡಲೆಂದೇ

ಕಲೆ ತಿಳಿವುಗಳ ಕಾಣಿ,
ಆಕಾಶವಾಣಿ,
ಬಂದಿಹುದು ಇಂದೆಮ್ಮ ಕಲ್ಯಾಣಪುರಕೆ ;
ಆದರಿಂದ ಇನಿತೆಲ್ಲ ಈ ಪರಾಮರಿಕೆ.

೯

ನಾಡಿನಧಿದೈವವೇ, ಕಲಿವಿನೀ ನೆಲೆಯಿಂದ
ಸೊರೆವ ಉಲಿಯಲೆಯ ವೃಂದ,
ಉಕ್ತಿಯಾಯಿತೆ, ಸತ್ಯ ಶಿವಗಳನೆ ಸಾರಲಿ,
ಗಾನವೆ, ಮನೋಹರ ಸ್ವರವಾಗಿ ನೇರಲಿ,
ವಿಜ್ಞಾನ, ಶಾಂತಿ ಸಾಧಕವಾಗಿ ತೇರಲಿ.
ಮಂಗಳದ ಭಂಗಿಯಲಿ ಬಾನರಂಗಕೆ ಚೆಂಗಿ
ಸುಸ್ವನದ ಚಿಗರಿ,
ಶೃಂಗಾರ ಸೌಭಾಗ್ಯ ಸೌರಭ ಧುರಂಧರ
ಸೌಂದರ್ಯಲಹರಿ,
ವಿಂಧ್ಯಾದ್ರಿ ಮಂದರ, ಕೆಳಬಾನ ಕಂದರ,
ಇಂತು ಬಹುದೂರ ಬಹುದೂರದಲಿ ತಂಗಿ,
ಸುಖದಿಂದ ಈ ನಾಡ ತೀವಿ, ಮೇರೆಯ ಮೀರಿ,
ದೂರದೇಶಗಳ ಸೇರಿ,
ಎಲ್ಲೆಡೆಯು ಶುಭದ ಎಳ್ಕಡಲೆ ಬೆಲ್ಲವ ಬೀರಿ
ಹರುಷವನು ನೀಡಲಿ; ಹಬ್ಬವನು ಮಾಡಲಿ;
ಸಿದ್ಧಿಯನು ಕಾಣಲಿ.
ಈ ದುಡಿಮೆ ಫಲಿಸಿ,
ಜಗದ ರಾಷ್ಟ್ರಗಳ ಮನ ಒಂದಾಗಿ ಕೂಡಲಿ.
ದ್ವೇಷ ಕಾಮ ಕ್ರೋಧ ನೆಲೆಯುಳಿದು ಮಾಣಲಿ.
ಒಡಹುಟ್ಟು ಒಡಹುಟ್ಟು ಕಾದುವುದ ನಿಲಿಸಿ
ಮನುಜ ಕುಲ, ಒಂದುಮನೆ, ಒಸಗೆಯಲಿ ಬಾಳಲಿ.

೧೦

ಇನಿತಿವನನುಗ್ರಹಿಸು ದೇವ, ಕೃಪೆ ಮಾಡು;
ನಿನ್ನವರು ಬೇಡುವೆವು, ಕರುಣೆಯಲಿ ನೋಡು.
ಹೇ ನಿತ್ಯ ವಸ್ತು,
ನೀಡು ಈ ಲೋಕಕೆ ಸಮಸ್ತ ಭದ್ರಂಗಳಂ,
ಶುಭವೆ ತುಂಬಲಿ ಜನದ ಉಸಿರು ಕಿವಿಕಂಗಳಂ,
ನಿತ್ಯ ಮಂಗಳ ಬೆಳಗಲೆಲ್ಲರ ಮನಂಗಳಂ.
ಸ್ವಸ್ತ್ಯಸ್ತು ಶುಭಮಸ್ತು ಶಾಂತಿರಸ್ತು:
ಅಸ್ತು ಅಸ್ತು
ಸ್ವಸ್ತಿ ಶಾಂತಿಃ ಶುಭಂ ; ಅಸ್ತು ಅಸ್ತು ; ತಥಾಸ್ತು
ಭದ್ರಂ ಶುಭಂ ಮಂಗಳಂ.

ಹಜರತ್ ಚರಿತೆ

ಹಜರತ್ ಮಹಮ್ಮದರು—ಅವರ ಪಾವನ ಆತ್ಮ
ಶಾಂತವಾಗಿಹುದ ಅಲ್ಲಾಹ್ ಅನುಗ್ರಹಿಸಲಿ,—
ಜನ್ಮ ತಾಳಿದುದು ಅರಬೀ ದೇಶದಲಿ ಎಂದು
ಎಲ್ಲ ಬಲ್ಲೆವಲೆ. ಹಜರತರು ಹುಟ್ಟುವ ಹಿಂದೆ
ಅರಬೀ ಜನರ ಬಾಳು ಬಹು ಮೂಳವಾಗಿತ್ತು.
ಕಲ್ಲು ದೇವರು ; ಅಣ್ಣತಮ್ಮ ಒಬ್ಬನನೊಬ್ಬ
ಹಿಂಸಿಸುವುದೇ ಬದುಕು; ಹೆಣ್ಣುಮಗು ಹುಟ್ಟಿತೋ
ಅದ ಕೊಲ್ಲುವುದೆ ನೀತಿ : ಇವು ಅಂದಿನಾ ಜನದ
ಬಾಳ ಮಟ್ಟವನು ತೋರುವ ಮೂರು ಸಂಗತಿ.

ಇಂಥ ಜನದಲಿ ಹುಟ್ಟಿ ಗುರುವರರು, ಆದರಿರವ
ತಿದ್ದುವುದು ಎಂತೆಂದು ಆರಯಿಸಿ, ದೈವ ಕೃಪೆ
ತಮ್ಮ ಬಾಳನು ತುಂಬಿ ಬರೆ, ಲೋಕವನೆ ಕಾವ
ಹಿರಿಯ ತತ್ತ್ವಗಳ ಕಿವಿಯಲೆ ಕೇಳಿ, ಬಾಯಿಂದ
ನುಡಿದು, ಬಾಳಲಿ ನಡೆದು, ಇಂದು ಲೋಕದ ಮುಖ್ಯ
ಧರ್ಮಗಳೊಳೊಂದಾದ ಇಸ್ಲಾಮು ಧರ್ಮವನು
ಸಂಸ್ಥಾಪಿಸಿದರು. ಈ ಕಾರ್ಯದಲಿ ಗುರುವರರು
ಎಂಥ ಉದ್ಯಮ, ಎಂಥ ಧೈರ್ಯ ಸಾಹಸ, ಎಂಥ
ಔದಾರ್ಯ ದೈವ ವಿಶ್ವಾಸ ಭಗವದ್ಭಕ್ತಿ,
ಎಂಥ ಧೃತಿಮತಿಯ ತೋರಿದರು, ಎಂಬುದನವರ
ಚರಿತೆಯನು ನೋಡೆ ತಿಳಿಯುವುದು. ಆದರೆ ಅದನು
ನೋಡುತಿಹ ವೇಳೆ ಕಾರ್ಯದಲಿ ಗುರು ತೋರಿಸಿದ
ಈ ಎಲ್ಲ ಗುಣಮೊಡನೆ ಅವರು ಜನರನು ಒಲಿಸಿ
ತನ್ನವರ ಮಾಡಿಕೊಂಡುದರ ಪರಿಯೂ ಮನಕೆ
ತುಂಬ ಸೋಜಿಗವಾಗಿ ಕಾಣುವುದು. ಗುರುವರರ
ಈ ಪರಿಯ ಗುಣದ ಮೆರೆಯುವ ಕೆಲವು ಸಂಗತಿಯ
ಈಗ ಬರೆಯುವೆನು.

ಮೆಕ್ಕಾ ನಗರವನು ಬಿಟ್ಟು
ಗುರು ಮದೀನಾ ನಗರವನು ಸೇರಿ ಅಲ್ಲಿಂದ
ತಮ್ಮ ಪಂಥವನು ಹರಡಿದರೆಂದು ಎಲ್ಲರೂ
ಕೇಳಿಹೆವು. ಹೊಸ ಮತವ ಸಾರುತಿಹನೆಂದಿವರ
ಇವರ ಸಂಟಿನ ಕೊರೇಷೀ ಜನವೆ ವಿದ್ರೋಹಿ
ಎಂದು ಭಾವಿಸಿತು. ಇವರನು ಕೊಲ್ಲಬೇಕೆಂದು
ಶಪಥ ಮಾಡಿತು. ಇಂತು ಹಗೆವವರ ಕೈಯಿಂದ
ಕೊಲೆಯಾಗದಿರಲೆಂದೆ ಗುರುಗಳು ಮದೀನಾಕ್ಕೆ

ಹೊರಟು ಬಂದರು. ಇವರ ಉಪದೇಶ ಸರಿಯೆಂದು ಎಷ್ಟೊ ಮಂದಿಗೆ ತೋರಿ ಅವರು ಇವರೆಡೆ ಬಂದು ಮುಸ್ಲಿಮ್‌ಗಳಾದರಪ್ಪುದು. ದೇವರಿಗೆ ತನ್ನ ಶಿರ ಅರ್ಪಿಸಿಕೊಂಡವನೆ ಮುಸ್ಲಿಂ. ಇಂಥವನು ಎಲ್ಲ ಜಗಕೂ ಶಾಂತಿಯನು ಬಯಸುವನು ; ಎಲ್ಲ ತಾಣದಲಿ, ಹೊತ್ತಿನಲಿ, ಶಾಂತಿ ಅನುಸಂಧಾನ ವ್ರತದೀಕ್ಷೆ ಎಂಬಂತೆ ಬಾಳ್ವೆಯನು ನಡಸುವನು. ಹೊಸ ಧರ್ಮ ಇಂತು ಬೆಳೆಯುತಲಿರಲು ಗುರು ಒಮ್ಮೆ ಮೆಕ್ಕಾಗೆ ಹೋಗಿ ಕಾಬಾ ಪ್ರದಕ್ಷಿಣೆಮಾಡಿ ಬರಬೇಕು ಎಂದು ಮನಮಾಡಿ ಅನುವಾದರು. ಮೆಕ್ಕಾಗೆ ಬರುವುದಕೆ ಅನುಮತಿಯ ಕೇಳುವುದು; ಅಲ್ಲಿಯ ವಿರೋಧಿಗಳು ಆಗಬಹುದೆನೆ ಹೋಗಿ ಕ್ಷೇತ್ರಯಾತ್ರೆಯ ಮುಗಿಸಿ ಹಿಂತಿರುಗುವುದು: ಎಂದು ಹಜರತರು ನಿಶ್ಚಯಿಸಿದರು. ವಿರೋಧಿಗಳೆಡೆಗೆ ಯಾರು ಹೋಗಲಿ ? ಅವರೆ, ಇವರೆ, ಇನ್ನೊಬ್ಬರೆ, ಎಂದು ಯೋಚಿಸಿ ಕೊನೆಗೆ ಅಚ್ಚಿನ್ನ ಗುರುಭಕ್ತ ಓತ್ಮನರ ಕಳುಹುವುದು ಎಂದು ಆಯಿತು. ಬೇರೆ ಯಾರು ಹೋದರು ವಿರೋಧಿಗಳವನ ಕೊಲಬಹುದು; ಓತ್ಮನರ ಕೊಲ್ಲಲಾರರು. ಹಗೆಗಳಲಿ ಕೂಡ ಈತನನು ಕುರಿತು ಬಹು ಮರ್ಯಾದೆ, ಗೌರವ. ಇಂತು ಓತ್ಮಾನ್ ಸಾರಿ ಬಂದು ಮೆಕ್ಕಾ ಸೇರಿ ಪ್ರತಿಪಕ್ಷದಧಿಪತಿಗೆ ಗುರುವಿನಿೀ ಇಚ್ಛೆಯನು ತಿಳಿಸಿದರು. ಅವರು, "ಈ ಸಲ ನಿಮ್ಮ ಗುರು ಇಲ್ಲಿ ಬರುವುದಾಗದು. ಒಂದು ವರುಷ ಕಳೆಯಲಿ. ಆಗ ಬರುವುದಕೆ ಅನುಮತಿಯ ನೀಡುವೆವು," ಎಂದರು.

ಭಕ್ತ ಓತ್ಮಾರ್, "ಕ್ಷೇತ್ರಯಾತ್ರೆ ಬರುವರ ನೀವು
ಕ್ಷೇತ್ರದೆಡೆ ಬರದಂತೆ ತಡೆವ ಈ ನಡೆ ತಪ್ಪು.
ಇನ್ನು ನಿಮ್ಮಿಚ್ಛೆ ಎಂತೋ ಅಂತು ಮಾಡಿರಿ.
ಗುರುಗಳೇನೋ ತಮ್ಮ ಯಾತ್ರೆ ನಡೆಸದೆ ಬಿಡರು.
ತಡೆದು ಕದನಕೆ ಕರೆದು ಕಡಿದಾಡಿ ಸೋತೇ
ದಾರಿ ಬಿಡಿ," ಎಂದು ಹೇಳಿದರು. ಹಗೆ,"ಆ ಮಾತು
ಬೇರೆ. ಕದನಕೆ ಬಂದ ವೇಳೆ ಕದನದ ಹದನು.
ಈಗ ನೀವೈತಂದ ಮಾತಿಗಿದು ಉತ್ತರ,"
ಎಂದು ನುಡಿದರು. ಆತ, "ಅಂತಿರಲು ನಾ ತಿರುಗಿ
ಹೊರಡುವೆನು," ಎನಲು ಆ ಮಂದಿ, "ಎಂತೂ ಇಲ್ಲಿ
ಬಂದಿಹಿರಿ ; ನೀವಾದರೂ ಪ್ರದಕ್ಷಿಣೆ ಮಾಡಿ
ಹೋಗಿ,"ಎಂದರು. "ಯಾತ್ರೆಮಾಡಬೇಕೆಂದು ಗುರು
ಕಾದಿಹರು. ಅವರು ಮಾಡದ ಈ ಪ್ರದಕ್ಷಿಣೆಯ
ನಾನು ಮಾಡೆನು. ಅವರ ಜೊತೆಯಲೇ ಮಾಡುವೆನು,"
ಎಂದನಾತ. ವಿರೋಧಿಗೆ ಕೋಪವೇರಿತು.
"ದರ್ಪದಲಿ ನುಡಿಯುವಿರ? ನುಡಿದು ಹಿಂತಿರುಗುವಿರ?
ನಾವು ನಿಮ್ಮನು ಬಿಡುವುದಿಲ್ಲ," ಎಂದರು ಅವರು.
ಇತ್ತ, ಓತ್ಮಾರ್ ಏನು ಉತ್ತರವ ತರುವನೋ
ಎಂದು ಗುರು ಕಾದಿಹರು. ದಿನ ಕಳೆದರೂ ಆತ
ಬರಲಿಲ್ಲ. ಶಿಷ್ಯರಲಿ ಒಬ್ಬ, "ನಾವೆಲ್ಲರೂ
ಕಾಬಾ ಪ್ರದಕ್ಷಿಣೆಗೆ ಹಗೆಯ ಅನುಮತಿ ಬೇಡಿ
ಇಲ್ಲಿ ಕಾದಿರೆ ಪುಣ್ಯಶಾಲಿ ಓತ್ಮಾರ್ ಅಲ್ಲಿ
ಅದ ಸುತ್ತುತಿಹರು; ಅವರೇ ಧನ್ಯ," ಎಂದರು.
ಗುರು,"ಸುತ್ತುವನೆ ಓತ್ಮಾರ್? ಅವನ ಶೀಲವನರಿಯೆ.
ತಾನು ಗುರುವೆಂಬ ನಾನದನು ಸುತ್ತುವ ದಿವಸ

ನನ್ನ ಜೊತೆಯಲಿ ಸುತ್ತುವನು ಹೊರತು ತಾ ಮೊದಲು
ಅದನು ಸುತ್ತನು," ಎಂದು ಬೆಸಸಿದರು. ಹತ್ತಿರದ
ಜನರ ಶೀಲ ಸ್ವಭಾವವನಿವರು ಇಂತಪ್ಪ
ವಿವರ ವಿವರದಲಿ ತಿಳಿದಿಹರು. ಬಹುದಿನ ಕಳೆದು
ಶಿಷ್ಯ ಹಿಂತಿರುಗದಿರೆ ಗುರು ಆತನನು ಕುರಿತು
ಚಿಂತೆಮಾಡಿದರು. ಮಧ್ಯದಲಿ ಅವನನು ಶತ್ರು
ಕೊಂದನೆಂದೇ ಯಾರೊ ಸುದ್ದಿಯನು ಹರಡಿದರು.
ಯಾತ್ರೆ ಹೋಗುವುದೆಂದು ನಿಶ್ಚಯಿಸಿ, ಶಾಂತಿಯಲಿ
ಅದನು ನಡೆಸುವುದಾಗದಿರೆ ಕಾದಿ ಹೋಗುವುದು
ಎಂದು ಗುರು ಮುಖ್ಯ ಶಿಷ್ಯರ ಜೊತೆಗೆ ನಿರ್ಧರಿಸಿ,
ಪಡೆಯನಣಿಮಾಡಿ ಎಲ್ಲರನವರ ಕಾರ್ಯದಲಿ
ನಿಲಿಸಿ ಯಾತ್ರೆಯಲಿ ಹೊರಟರು. ಕೊಲ್ಲ ಕಾದಿರುವ
ಹಗೆಯ ಮೆಕ್ಕಾ ಕ್ಷೇತ್ರಯಾತ್ರೆ ನಿಜದಲಿ ಇಂತು
ಜೈತ್ರಯಾತ್ರೆಯೆ ಆಯ್ತು. ದೇವರನು ಕಾಂಬವನು
ಯೋಧನಾಗಿಯೆ; ಹಗೆಯ ಕಾದಿಯೆ, ಸದೆಬಡಿದೆ,
ದಾರಿಯನು ಬಿಡಿಸಿಕೊಳಬೇಕೆಂಬ ತತ್ತ್ವವನು
ಈ ಯಾತ್ರೆ ಕಲಿಸುವುದು. ಶತ್ರು ನಾಯಕರಿವರ
ತಮ್ಮ ನಗರಕೆ ಸೇನೆ ಸಹಿತ ಬಾರದ ರೀತಿ
ತಡೆಗಟ್ಟಲೆಂದು ಸೈನ್ಯಗಳೊಡನೆ ಹೊರಟರು.
ದಾರಿಯಲಿ ಹೋದೆಯ್‌ಬಿಯಾ ಎಂಬ ತಾಣವಿದೆ;
ಮುಸ್ಲಿಮರ ಸೈನ್ಯ ಆಯೆಡೆ ಬಂದು ನಿಂತಿದೆ.
ಶಿಷ್ಯನೊಬ್ಬನು ಗುರುವ ಕುರಿತು, "ಈ ಸುತ್ತಿನಲಿ
ನಮ್ಮ ಹಗೆಗಳ ಬಂಧುಗಳು ತುಂಬ ಜನ ಇಹರು;
ಇವರ ಮನೆಗಳ ಸುಟ್ಟು, ಹೆಂಗಸರು ಮಕ್ಕಳನು
ಹಿಂಸೆ ಮಾಡಿದರೆ ಹಗೆ ಬೇಗನೆ ಸಮಾಧಾನ

ಬೇಡಿ ಒರಬಹುದು," ಎಂದನು. "ಅದೇತರ ಕೆಲಸ?" ಎಂದು ತಿದ್ದಿದರು ಗುರು. "ನಾವೀಗ ಹೊರಟಿಹುದು ಯಾತ್ರೆಮಾಡುವ ಎಂದು. ಯುದ್ಧಮಾಡಲು ಅಲ್ಲ. ಯಾತ್ರೆಯನು ತಡೆವವರ ಕಾದುವುದು ಸರಿ ಹೊರತು ಬೇರೆ ಮಂದಿಯ ಹಿಂಸಿಸುವುದು ಇದರಲಿ ಸಲ್ಲ." ಮರುದಿವಸ ಎದುರ ಪಕ್ಷದ ಸೇನೆ ಐತಂದು ಅನಿತು ದೂರದಲಿ ಪಾಳೆಯಹಾಕಿ ನಿಂತಿತು. ಇನ್ನೇನು ಯುದ್ಧ ನಡೆವುದೆ ನಿಜ. ಮರುದಿವಸ ಅದು ನಡೆಯಬೇಕು. ಹಗೆಗಳಲಿ ಒಬ್ಬನು ಇವರ ಬಲವನರಿಯುವ ಎಂದು ಯಾವುದೋ ನೆಪಮಾಡಿ ಇವರ ಪಾಳೆಯಕೆ ಬಂದನು. ಅಂದು ಸಂಜೆಯಲಿ ಗುರು ಒಂದು ಮರದಬಳಿ ನಿಂತು ಅನುಯಾಯಿಗಳ ಕರೆದು ಒಬ್ಬೊಬ್ಬನೂ ತನ್ನ ಕೈಯಲಿ ಅವನ ಕೈಯಿಟ್ಟು, "ಏನೆ ಆದರು ಧರ್ಮವನು ಬಿಡೆವು," ಎಂದು ಆಣೆಯ ಮಾಡಿಸಿದರು; ತಾವೂ ಅವರು ಯಾರನೂ ಬಿಡೆನೆಂದು ಆಣೆಯನು ಮಾಡಿದರು. ಆ ದಿನಕೆ ಮುನ್ನ ಓತ್ಮಾರ್ ಸೌಖ್ಯವಾಗಿಪರು ಎಂದು ತಿಳಿದಿರಲು ಗುರು, "ಈಗ ಓತ್ಮಾರ್ ಇಲ್ಲಿ ಇಲ್ಲ; ಅವನಿದ್ದಂತೆ ಎಣಿಸಿ ಓತ್ಮಾರ್ ನನಗೆ, ನಾನು ಓತ್ಮಾರ್‌ಗೆ, ಮಾಡುವ ಆಣೆಯೆರಡನೂ ನಾನೆ ಮಾಡುವೆನು. ಈ ನನ್ನ ಬಲಗೈ ಅವನ ಪರವಾಗಿ, ನನ್ನ ಎಡಗೈ ನನ್ನ ಪರವಾಗಿ, ಭಾಷೆಮಾಡುವುದ ನೋಡಿರಿ," ಎಂದು, ಉಳಿದವರು ಮಾಡಿದ್ದ ಭಾಷೆಯನು ತನಗೆ ಓತ್ಮಾರ್‌ಗೆಂದು ತಾವು ಮಾಡಿದರು. ಸೇನೆಯ ಮನದ ಉತ್ಸಾಹ

ಇನಿತು ಅನಿತಲ್ಲ. ಪರಪಕ್ಷದಿಂದಿವರೆಡೆಗೆ
ಬಂದವನು ಈ ಎಲ್ಲ ಸಂಭ್ರಮವ ನೋಡುತ್ತ
ದೂರದಲಿ ನಿಂತಿದ್ದು, ಹಿಂದಿರುಗಿ ಇದನೆಲ್ಲ
ತನ್ನ ಪಕ್ಷಕೆ ವರದಿಮಾಡಿದನು. "ಪರ್ಷಿಯಾ
ಬೈಜಾಂಟಿಯಾ ಆಬಿಸೀನಿಯಾ ರಾಜ್ಯಗಳ
ಕಿಸ್ರುಖೈಸರ ನಜಾಷೀ ಮಹಾ ನರಪರನು
ನಾನು ನೋಡಿಹೆನು. ಅವರಲಿ ಸೇವೆಮಾಡುವರು
ಆ ತಮ್ಮ ದೊರೆಗಳಿಗೆ ಭಯದಿಂದ ತೋರಿಸುವ
ಮರ್ಯಾದೆ ಈ ಮಹಮ್ಮದ್ ಗುರುಗಳಿಗೆ ಇವರ
ಸೇವಕರು ಪ್ರೀತಿಯಲಿ ತೋರುವುದಕೆಣೆಯಲ್ಲ.
ಕಾಲಾಳು ಮೊದಲು ದಳಪತಿವರೆಗೆ ಎಲ್ಲರೂ
ತಮ್ಮ ಒಡೆಯನಿಗಾಗಿ ಜೀವವನು ತೆರುವುದೇ
ಪುಣ್ಯವೆಂದೆಣಿಸಿಹರು. ಇಂಥ ಸೇನೆಯ ಜೊತೆಗೆ
ಕಾದಿ ಬದುಕುವರಾರು ? ನಮ್ಮ ಸೇನಾನಿಗಳು
ನಾಳೆ ಬೇಗನೆ ಅವರ ಬಳಿ ಸಾರಿ ಶಾಂತಿಯನು
ಮಾಡಿಕೊಂಬುದು ಮೇಲು," ಎಂದು ನುಡಿದನು. ಅಂತೆ
ಮರುದಿನ ಕೊರೇಷಿಗಳ ಮುಖ್ಯ ಜನ ಮೂವರು
–ಅಮ್ರು, ಹಾಫಸ್, ಅಬ್ದುಲ್ ಉಸ್ಸ–ಗುರುಗಳ ಬಳಿಗೆ
ಶಾಂತಿಸಂಧಾನ ಮಾಡಲು ಬಂದು ಸೇರಿದರು.
ಅದರ ಹಿಂದಿನ ದಿವಸ ಮುಸ್ಲಿಮರ ಕಾವಲಿನ
ಜನ ಕೊರೇಷಿಗಳ ಪಕ್ಷದ ಹತ್ತು ಮಂದಿಯನು
ಸೆರೆಮಾಡಿ ಸೆಳೆದು ತಂದಿಹರು. ಈ ಮುಖ್ಯ ಜನ
ಈ ಹತ್ತು ಜನವ ಬಿಡಬೇಕೆಂದು ಗುರುಗಳನು
ಕೇಳಿದರು. ಗುರು, "ನಮ್ಮ ಹತ್ತು ಜನವನು ನೀವು
ಹಿಡಿದು ನಿಲಿಸಿಹಿರಿ. ಅವರನು ನೀವು ಬಿಟ್ಟರೆನೆ
ನಾವು ನಿಮ್ಮವರ ಬಿಡುವೆವು," ಎಂದು ಬೆಸಸಿದರು.

ಇಂತು ಓತ್ಮಾರ್ ಮತ್ತೆ ಇವರ ಸಾನ್ನಿಧ್ಯವನು
ಸೇರಿದರು. ಶಾಂತಿ ನುಡಿಯಲು ಬಂದ ಮೂರುಜನ
ಗುರುಗಳಿಗೆ, "ನೀವು ಈ ವರ್ಷ ಈ ಯಾತ್ರೆಯನು
ಬಿಟ್ಟುಬಿಡಿ; ಬರುವ ವರ್ಷಕೆ ಬನ್ನಿ; ಇದು ನಮಗೆ
ಒಪ್ಪಿಗೆ. ಹತ್ತು ವರುಷದ ದಿವಸ ನಿಮ್ಮವರು
ನಮ್ಮಲ್ಲಿ ಬರಬಹುದು, ನಮ್ಮವರು ನಿಮ್ಮಲ್ಲಿ
ಬರಬಹುದು ಎಂದು ಒಪ್ಪಂದವನು ಮಾಡುವ,"
ಎಂದು ಸೂಚನೆಮಾಡಿದರು. ಯಾತ್ರೆ ಹೊರಟವರು
ಅದನುಳಿದು ಹಿಂದಿರುಗುವುದು ಇವರ ಶಿಷ್ಯರಿಗೆ
ತೀರ ಸಮ್ಮತವಲ್ಲ. ಗುರು ತುಂಬ ಯೋಚಿಸಿ
ಕೊನೆಗೆ, ಆಗಲಿ, ಎಂದು ಹೇಳಿದರು. ಶಿಷ್ಯರು
"ಗುರುಗಳೇ, ತಾವು ಯಾತ್ರೆಯನು ಮಾಡುವೆನೆಂದು
ಹೇಳಿ ಅದ ಇಂತು ಬಿಡುವುದೆ?" ಎಂದು ಕೇಳಿದರು.
ಗುರು, "ಯಾತ್ರೆಯನು ಇದೇ ವರುಷ ನಡಸುವೆನೆಂದು
ನಾನು ಹೇಳಿದೆನೆ ? ಮುಂದಿನ ವರ್ಷ ನಡಸಿದರೆ
ಅದು ಕೂಡ ಯಾತ್ರೆಯೇ," ಎಂದು ನುಡಿದರು. "ನಾವು
ಯಾತ್ರೆ ಮಾಡುವೆವೆಂದು ಶಪಥದಲಿ ಹೊರಟಿಹೆವು ;
ಯಾತ್ರೆಯನು ನಿಲ್ಲಿಸುವೆವೆಂದು ಹಗೆಗಳ ಶಪಥ ;
ನೀವು ನಮ್ಮವರ ಮರ್ಯಾದೆಯನು ಕೈಬಿಡಲು
ಶತ್ರುಪಕ್ಷದ ಮುಂದಿ ಹೆಮ್ಮೆಯಲಿ ಬೀಗುವುದು,"
ಎಂದು ಶಿಷ್ಯರು ಮತ್ತೆ ಕಾಡಿದರು. ಗುರುಗಳು,
"ಒಳ್ಳಿತು. ಈ ಎಲ್ಲ ಮಾತು ತಿಳಿದಿದೆ ನನಗೆ.
ಈ ಸಲವೆ ಯಾತ್ರೆ ನಡೆಸುವೆವೆನಲು ಹಗೆಯೊಡನೆ

ಕಾದಬೇಕಾಗುವುದು. ಒಹ ವರ್ಷ ಆಗಲೆನೆ
ಯುದ್ಧವಿಲ್ಲದೆ ಯಾತ್ರೆ ನಡೆಯುವುದು. ನಮ್ಮವರ
ಹಗೆಯವರ ಎರಡು ಸೇನೆಯಲಿ ಎನಿತೋ ಜನವ
ಸಾಪ ಬಾಯಿಗೆ ದೂಡಿಯಾದರೂ ಯಾತ್ರೆಯನು
ಈ ಸಲವೆ ಮಾಡಬೇಕೆಂಬ ಹಟ ಬೇಡೆಮಗೆ.
ಬನ್ನಿ. ಶಾಂತಿಯ ಪತ್ರಿಕೆಯನು ಬರೆಸುವ," ಎಂದು
ಅವರಿಗಪ್ಪಣೆ ಮಾಡಿದರು. ಶಾಂತಿ ಪತ್ರವನು
ಬರೆವುದಕೆ ಹಜರತರ ಅಳಿಯ, ವಿಶ್ವಾಸಿಗಳ
ಸೇನಾನಿ, ಅಲೀ ಮಹಾತ್ಮನೇ ಕುಳಿತರು.
ಪತ್ರದಲಿ ಬರೆವ ಒಕ್ಕಣೆಯ ಮಾತನು ಕುರಿತೆ
ಚರ್ಚೆ ಬಂದಿತು. ಪೂರ್ವದಲಿ ಯಾವ ಮಾತನೂ
ಇವರು 'ದೇವರ ಹೆಸರಿನಲಿ' ಎಂಬ ಮಾತಿಂದ
ಮೊದಲು ಮಾಡುವರು. ಹಜರತರು ದೇವನು ಎಂಬ
ಪದಕೆ ಮೊದಲಲಿ, ದಯಾಶೀಲ, ಕರುಣಾಮೂರ್ತಿ,
ಎಂಬ ಪದಗಳನು ಸೇರಿಸುವ ಹೊಸ ಪದ್ಧತಿಯ
ಬೋಧಿಸಿರುವರು. ಅಲಿ ತಮ್ಮ ವಾಡಿಕೆಯಂತೆ
ಈ ದಯಾಶೀಲ ಕರುಣಾಮೂರ್ತಿ ಪದಗಳನು
ಬರೆದು ಓದಿದರು. ಹಗೆಗಳ ನಾಯಕರು, "ನಮಗೆ
ನೀವು ಹೊಗಳುವ ದಯಾಶೀಲ ಕರುಣಾಮೂರ್ತಿ
ಗೊತ್ತಿಲ್ಲ. ಈ ಮೊದಲು ಎಂತಂತೆ ದೇವರು
ಎಂದು ಮಾತ್ರವೆ ಬರೆಯಬೇಕು," ಎಂದೊರೆದರು.
ಅಲಿ, "ಇದ ತಾನು ಒಪ್ಪುವುದಿಲ್ಲ. ಅಲ್ಲದೆ
ಏನೆ ಆಗಲಿ ಬರೆದ ಮಾತನಳಿಸುವುದಿಲ್ಲ,"
ಎಂದು ಹೇಳಿದರು. ಹಜರತರು, "ಈ ಮಾತಿರಲಿ;
ಹಠ ಏತಕೆ ?" ಎಂದು ಹೇಳಿದರು. ಇದರಿಂದ

ಒಪ್ಪಂದವೇ ಕೆಡುವುದೆಂಬಂತೆ ಕಾಣಿಸಲು
ಅಲಿಯನು ಕುರಿತು, "ಈ ವಿಷಯಕೇತಕೆ ಜಗಳ,
ಅವರಿಷ್ಟದಂತೆ ಬರೆಯಿರಿ," ಎಂದು ಬೆಸಸಿದರು.
ವಿಧಿಯಿಲ್ಲ. ಅಲಿ ಆಣತಿಯಂತೆ ತಿದ್ದಿದರು.
ಮುಂದೆ ಬರೆವಂದು ಹಜರತರ ವರ್ಣಿಸುವಲ್ಲಿ,
ದೇವರಟ್ಟಿದ ಪ್ರವಾದಿ, ಮಹಮದರು, ಎನಲು,
ಪ್ರತಿಪಕ್ಷ, "ಇವರು ದೇವರ ಪ್ರವಾದಿಗಳೆಂದು
ನಾವು ಒಪ್ಪುವುದಿಲ್ಲ. ಈ ಮಾತು ಪತ್ರದಲಿ
ಬರಬಾರದೆಂ"ದು ತಡೆದರು. ಬೇರೆ ಏನೆಂದು
ಬರೆಯುವುದು ಎನಲು "ಇಂಥವರ ಮಗ ಇಂಥನರು,
ಎಂದು ಮಾತ್ರವೆ ಬರೆಯಬೇಕು" ಎಂದರು. ಇತ್ತ
ಹಜರತರ ಶಿಷ್ಯರೆಲ್ಲರಿಗು ಇದು ಬೇಸರ.
"ಶಾಂತಿಸಂಧಾನ ಕೆಟ್ಟರೆ ಕೆಡಲಿ ; ಗುರುಗಳನು
ದೇವರ ಪ್ರವಾದಿ ಅಲ್ಲೆಂದು ಶಿಷ್ಯರು ನಾವು
ಒಪ್ಪಿಕೊಳ್ಳುವುದೆಂತು" ಎಂದಿವರು ಒದರಿದರು.
ಮತ್ತೆ ಗುರು, "ಅಣ್ಣದಿರೆ, ನಾವು ತೊಡಗಿಹ ಕೆಲಸ
ಒಪ್ಪಂದ ಮಾಡಿಕೊಂಬುದು. ಒಕ್ಕಣೆಯ ಮಾತು
ಎಂತಿದ್ದರೇನಂತೆ? ಅವರಿಷ್ಟದಂತೆಯೇ
ನನ್ನ ಬಣ್ಣಿಸಿರಿ ; ಒಪ್ಪಂದವನು ಮುಗಿಸಿರಿ,"
ಎಂದು ಕಟ್ಟಾಣತಿಯ ಮಾಡಿದರು. ಪತ್ರವನು
ಹಗೆ ಬಯಸಿದಂತೆ ಬರೆದಿರಲು ಗುರು ಒಳಿತೆಂನು
ತಮ್ಮ ಜನದೊಡನೆ ಸುಖದಿಂದ ಹಿಂತಿರುಗಿದನು.

ಹಜರತ್ ಮಹಮ್ಮದರು ಯುದ್ಧದಲಿ ತೊಡಗಿದುದು
ಒಂದೆರಡು ಸಲವಲ್ಲ. ನೂರು ಇನ್ನೂರು ಸಲ.
ಯುದ್ಧದಲಿ ಅವರು ಕೆಲವೇಳೆ ಸೋತುದು ಉಂಟು:

4822

ಆದರದಕೂ ಹೆಚ್ಚು ಸಲ ಗೆಲ್ಲ ಸವಿದರು.
ಅವರು ತಮಗಾಗಿ ಸಾವಿಗೆ ಹೆದರಿದವರಲ್ಲ ;
ಬಂಧು ಮಿತ್ರರು ಸತ್ಯಕಾಗಿ ಸಾಯುವ ಹದನ
ಅಶುಭವೆಂದವರಲ್ಲ ; ಅಂತೆ ಇವರಾ ದಿವಸ
ಹೋದೆಯ್‌ಬಿಯಾದಲಿ ವಿರೋಧಿ ಪಕ್ಷದ ಮಂದಿ
ಶಾಂತಿಸಂಧಾನ ಮಾಡಲು ಬರುವುದಕೆ ಮುನ್ನ
ಯುದ್ಧ ಮಾಡಲು ಎಲ್ಲ ಸಿದ್ಧತೆಯ ನಡಸಿದರು.
ಆದರೂ ಯುದ್ಧವಿಲ್ಲದೆ ಕೆಲಸ ನಡೆಯುವುದು,
ಇಂದಲ್ಲ, ನಾಳೆ, ಎನೆ, "ಒಳಿತು, ನಾಳೆಯೆ ಸಾಕು,
ಏತಕೆ ವ್ಯಥಾ ಜೀವಹತ್ಯ ?" ಎಂದುದೆ, ತಮ್ಮ
ದೇವರನು ಕುರಿತ ವರ್ಣನೆಯ ಮಾತನು ಬಿಟ್ಟು,
ತಾವು ಗುರುವೆಂಬ ಮರ್ಯಾದೆಯನು ಬೇಡೆಂದು,
ಶಾಂತಿಯನು ಒಪ್ಪಿದರು. ಯೋಧನಿಗೆ ಯುದ್ಧದಲಿ
ತೊಡಗುವರೆ ಒಂದು ರೀತಿಯ ಧೈರ್ಯಬೇಕು ದಿಟ.
ಯುದ್ಧವನು ಒಲ್ಲೆನೆಂಬುದಕೆ ಅವನಿಗೆ ಅದಕೂ
ಮಿಗಿಲ ರೀತಿಯ ಧೈರ್ಯ ಬೇಕು. ತನ್ನನು ಮಂದಿ
ಹೇಡಿ ಎಂದೆಣಿಸಿಬಿಟ್ಟಾರು ಎಂಬಂಜಿಕೆ,
ಯುದ್ಧವೇ ಶಾಂತಿಯೇ ಎಂಬಲ್ಲಿ ಯೋಧನನು
ಯುದ್ಧ ಎಂಬಂತೆ ಮಾಡುವುದು. ಇದು ಸಹಜವೇ.
ತನ್ನ ಶೌರ್ಯವ ಕುರಿತು ತನಗೆ ಸಂಶಯವಿಲ್ಲ ;
ಉಳಿದ ಜನ ಏನೆಂಬರೆಂಬ ಶಂಕೆಯು ಇಲ್ಲ ;
ಕಾರ್ಯವೇ ಮುಖ್ಯ, ಕಾದುವುದದಕೆ ಸಾಧನ :
ಎಂಬ ತಿಳಿವಿಹುದು ಯಾರಿಗೆ ಅಂಥವರು ಮಾತ್ರ
ಇಂಥ ಹೊತ್ತಿನಲಿ ಶಾಂತಿಯ ವರಿಸಿ ನಡೆಯುವರು.
ಹಜರತರ ಧೈರ್ಯ ಇಂಥದು.

ಯುದ್ಧ ನಡೆಯಿತೇ

ಗುರು ತನ್ನ ಸೇನೆಯಲಿ ಕಾಲಾಳು, ದಳಪತಿ,
ಎಂಬ ಭೇದವನು ಮಾಡದೆ ಎಲ್ಲರನು ಕುರಿತು
ಒಂದೆ ಆ ಹಿರಿಯ ವಾತ್ಸಲ್ಯವನು ತೋರುವರು.
ಯಾಮಾಮ ಎಂಬ ತಾಣದ ಯುದ್ಧದಲಿ ಶತ್ರು
ಬಹುಸಂಖ್ಯೆಯಲಿ ಮೇಲೆ ಬಿದ್ದು ಮುಸ್ಲಿಂ ಜನರು
ಬಹುಮಂದಿ ಮುಕ್ತರಾದರು. ಅವರೊಳೊಬ್ಬಾತ
ಭಕ್ತ ಹಂಜಾ. ಈತ ಗುರುಗಳಿಗೆ ವಾವೆಯಲಿ
ಮಾವ. ವಯಸಿನಲಿ ಹಿರಿಯಾತ. ಗುರು ಬೋಧಿಸಿದ
ಧರ್ಮ ಮನಸಿಗೆ ಒಪ್ಪಿ ಅವರನನುಸರಿಸಿದರು.
ಗುರುಸೇವೆಯಲಿ ಸಾವು ಮುಕ್ತಿಕಲ್ಯಾಣ ; ಅದ
ಭಕ್ತ ಪ್ರಿಯಸತಿಯೆಂಬ ರೀತಿ ಒಲಿದಪ್ಪುವನು.
ಯಾಮಾಮ ಯುದ್ಧದಲಿ ಭಕ್ತ ಹಂಜಾ ಹಗೆಯ
ಗಡಣದಲಿ ನುಗ್ಗಿ ಸಾವೆಂಬುದಿಲ್ಲೆಂಬಂತೆ
ಕಾದಿದರು. ಹಗೆ ಹತ್ತುಮಂದಿ ಈ ಒಬ್ಬನನು
ಸುತ್ತಿದರು; ಕಡಿದು ಹಾಕಿದರು. ಅವರಲಿ ಯಾರೊ
ಇವನ ಕಿವಿಗಳ ಕುಯ್ದು ಅವರಲೇನೋ ಒಂದು
ಸಂತೋಷವನು ಪಡೆದು ತೆರಳಿದರು. ಸಂಜೆಯಲಿ
ಯುದ್ಧ ಕೊನೆಗಂಡು ಹಗೆ ಹಿಂದಿರುಗಿ ಹೋಗಿರಲು
ಗುರು ಸುತ್ತ ನೋಡಿ, "ಹಂಜಾ ಎಲ್ಲಿ?" ಎಂದರು;
ಆತ ಕಾದುತಲಿದ್ದ ದಿಕ್ಕಿನಲಿ ಅರಸಿದರು;
ಅವನ ದೇಹವನು ಕಂಡರು. ಸತ್ತನೇ ಎಂಬ
ದುಃಖಕೂ ಮಿಗಿಲಾದ ದುಃಖ ಗುರುವಿಗೆ ಇವನ
ಹಗೆಗಳಿಂತು ವಿರೂಪಮಾಡಿ ಅವಮತಿಯಿಂದ
ಕಂಡರೇ ಎನ್ನುವುದು. ಆ ಕ್ಷಣದ ಕೋಪವಲಿ

ಆವರು, ಹಂಜಾ ಒಬ್ಬರನು ಕೊಂದ ಖಣಕಾಗಿ
ಬರುವ ಯುದ್ಧದಲಿ ಶತ್ರುವಿನ ಎಪ್ಪತ್ತುಸಿರ
ನಾನು ತೆಗೆಯುವೆನೆಂದು ಉಸುರಿದರು. ಖತಿಯಿಂದ
ಇವರಿಂತು ಉಸುರುತಿರೆ, ದೇವರಿಂದಿವರೆಡೆಗೆ
ಸಂದೇಶಗಳ ತರುವ ದೂತವರ ಜೆಬ್ರಯಿಲ್
ಇವರ ಕಿವಿಯಲಿ ನುಡಿದ: "ಒಲಿದವರ ಕೊಂದುದಕೆ
ಖತಿಗೊಂಡು ಒಂದುಸಿರಿಗೆಪ್ಪತ್ತು ಉಸಿರುಗಳ
ಕೊಂಬೆನೆಂಬುದು ಸರಿಯೆ: ಆದರದಕೂ ಮಿಗಿಲ
ಸರಿ, ಖತಿಯ ನಿಗ್ರಹಿಸಿ ಹಗೆಯನುಳಿಸುವ ತಾಳ್ಮೆ."
ದೇವದೂತನ ವಚನ ಕಿವಿ ಸಾರೆ ಹಜರತರು,
"ಒಪ್ಪಿದೆನು; ತಾಳ್ಮೆಯನೆ ವಹಿಸುವೆನು," ಎಂದರು.
ಶವಗಳಿಗೆ ಸಂಸ್ಕಾರ ಮಾಡಿ ಗುರುಗಳ ಸೇನೆ
ಊರ ಸಾರಿತು. ಎಲ್ಲ ಮನೆಯಲೂ ಜನ ಅತ್ತು,
ತಂದೆಯನು, ತಮ್ಮನನು, ಅಣ್ಣನನು,ಅಮ್ಮನನು,–
ಇವರ ಸೇನೆಯಲಿ ಗಂಡಸರೊಡನೆ ಹೆಂಗಸರು
ಜೊತೆ ನಿಂತು ಕಾದಿದವರುಂಟು—ಕೊಂದನೆ ಸೇವ
ಎಂದು ಮೊರೆಯುತ್ತಲಿಹುದು ಕೇಳುತಿದೆ. ಗುರುಗಳಿಗೆ
ಇದು ಎಲ್ಲ ಅವಿಸಹ್ಯ ದುಃಖ. ಊರನು ಹೊಗುತ
ಜನದಳಲುಗಳನು ಕೇಳುತ ಇವರು ಒಂದು ಮನೆ
ಅಳುವರಿಲ್ಲದೆ ಸುಮ್ಮನಿರುವುದನು ನೋಡಿದರು.
ಜೊತೆ ಮಂದಿಯನು ಕುರಿತು,"ಇದು ಯಾರ ಬೀಡಾರ?
ಇವರು ನಂಟರ ಕಳೆದುಕೊಳ್ಳಲಿಲ್ಲವೆ ?" ಎಂದು
ಕೇಳಿದರು. ಸೇವಕರು, "ಭಕ್ತ ಹಂಜಾ ಇದ್ದ
ಬೀಡಾರ ಇದು," ಎಂದು ಹೇಳಿದರು. ಆ ಭಕ್ತ,
"ಗುರುಸೇವೆಯಲಿ ಸಾವು ಕಲ್ಯಾಣ; ಅದ ಎಲ್ಲ

ಬಯಸುವುದು ಸರಿ; ಸಾವೇವೇ ಎಂದು ಸತ್ತನೇ
ಎಂದು ಅಳಲುವುದು ಸರಿಯಲ್ಲ; ತಾಸೀ ದಿವಸ
ಸತ್ತೆನೇ ತನಗಾಗಿ ನೆಂಟರಳುವುದು ಸಲ್ಲ",
ಎಂದು ಆಜ್ಞೆಯನಿತ್ತು ಕಾಳಗಕೆ ಸಾರಿದರು.
ಅವರ ಕೊನೆಯಾಸೆಯನು ಸಲಿಸುವುದಕಾಗಿ ಆ
ಮನೆಯ ಜನ ಅಳದೆ ಬಾಯ್ಮುಚ್ಚಿಕೊಂಡೇ ಇಹುದು.
ಗುರು ಹೇಳಿದರು: "ಅಯ್ಯ, ಧರ್ಮವನು ಪಾಲಿಸುವ
ಕದನದಲಿ ಸಾಯುವುದು ಕಲ್ಯಾಣವೇ ಸತ್ಯ:
ಆದರೂ ಆ ಜೀವ ನಮ್ಮನುಳಿದಗಲಿತೇ
ಎಂದು ಅಳುವುದು ಕೂಡ ಸಹಜ. ಅದು ತಪ್ಪಲ್ಲ.
ಉಳಿದೆಲ್ಲರಳಿವಿಗೂ ಲೋಕ ಶೋಕವ ತೋರಿ
ಭಕ್ತ ಹಂಜಾ ಸತ್ತುದಕೆ ಅಳದೆ ಇರಬಹುದೆ ?"
ಆ ಕರುಳ ಮೆದುವಿನ್ನು ಎನಿತೆಂದು ಬಲ್ಲವರು
ಯಾರೊ,"ದೇವರು ದಯಾಶೀಲ ಕರುಣಾಮೂರ್ತಿ;
ದೇವರೆಂದೊಡನೆಯೇ ಈ ಎರಡು ಪದಗಳನು
ಒರೆಯಬೇಕೆಂದಿಹರು ಗುರು. ದೈವದುಳಿದ ಗುಣ
ನೂರು ಸಾವಿರ ಲಕ್ಷ ಕೋಟಿ ಲೆಕ್ಕಕೆ ಮಿಕ್ಕು
ಮಾನವನ ಮನದಳವ ಮೀರಿಹುದು. ಅವುಗಳಲಿ
ಉಳಿದಗುಣ ಮನುಜನಿಗೆ ಬೇಡದುವು ಎಂದಲ್ಲ;
ಆದರೂ ಎರಡು ಆ ಎಲ್ಲಕೂ ಹೆಚ್ಚಿನವು.
ನಮ್ಮ ದೇವರು ದಯಾಶೀಲ ಕರುಣಾಮೂರ್ತಿ
ಎಂದ ಗುರು ತಾ, ದಯಾಶೀಲ ಕರುಣಾಮೂರ್ತಿ
ಅಲ್ಲದಿನ್ನೇನು ?" ಎಂದರು. ಮನೋಗತ ತಿಳಿದು,
ಹತ್ತು ಜನ ಭಕ್ತ ಹಂಜಾ ಮನೆಗೆ ಸಾರಿದರು;
ಗುರು ನುಡಿದ ನುಡಿಯ ನಂಟಿಗೆ ತಿಳಿಸಿ ರಾತ್ರಿಯಲಿ

ಅಳಲು ತೊಡಗಿದರು. ಯುದ್ಧದಲಿ ಮೈಸೋತಿದ್ದ
ಗುರು ತಮ್ಮ ಬೀಡಾರದಲಿ ಮಲಗಿದೊಡನೆಯೇ
ನಿದ್ರೆಯೊಳಗಾಳಿದರು. ಸರಿಹೊತ್ತಿನಲಿ ಏನೊ
ತುಂಬ ಗದ್ದಲ ಕೇಳಿ ನಿದ್ರೆ ಕೆಟ್ಟಿದ್ದವರು,
"ಹೊಸ ಸುದ್ದಿಯೇನು ಕೆಟ್ಟದು ಬಂದಿತೋ ನೋಡಿ,"
ಎಂದು ಬೆಸಸಿದರು. "ಹೊಸ ಸುದ್ದಿಯೇನೂ ಇಲ್ಲ.
ಭಕ್ತ ಹಂಜಾ ಸತ್ತುದಕೆ ಹತ್ತು ಮಂದಿಯೂ
ಅವರ ಬೀಡಾರದಲಿ ಸೇರಿ ದುಃಖಿಸುತಿಹರು,"
ಎಂದು ಸೇವಕ ವರದಿಮಾಡೆ, "ಒಳಿತೆಸಗಿದರು;
ರತ್ನವನು ಕಳೆದುಕೊಂಡವರು ಗೋಳಿಡರಲ್ಲ
ಎಂದು ಸಂಜೆಯಲಿ ಕಳವಳವಾಯಿತೆನಗೆ; ಅದು
ಈಗ ಸರಿಹೋಯ್ತು," ಎಂದರು. ನಿದ್ದೆ ಕೆಟ್ಟುದಕೆ
ಮನಕೆ ಬೇಸರವಿಲ್ಲ. ಭಕ್ತನಿಗೆ ಅತ್ತರಲೆ
ಎಂಬುದು ಸಮಾಧಾನ. ಏನು, ಎಂತಹ ಕರುಳು!

ಮನುಜರನು ಕುರಿತು ಮಾತ್ರವೆ ಗುರು ಮಹಮ್ಮದರು
ದಯೆ ತೋರಲಿಲ್ಲ. ಬೇನೆಯ ಒರೆಯೆ ಬಾರದಿಹ
ಮೂಕ ಜಂತುಗಳ ಕುರಿತೂ ಅವರು ತೋರಿಸಿದ
ಕನಿಕರವ ಜನ ತಿಳಿಯಬೇಕು. ಇವರೊಂದು ಸಲ
ಪರಿವಾರದೊಡನೆ ಒಂದೂರ ಹೊಕ್ಕೈತರಲು
ಬಾಗಿಲಲೆ ಒಂಟೆ ಒಂದಿವರೆದುರು ಸಾರಿತು.
ದುಡಿದು ಸೋತಿದೆ; ಬೆನ್ನುಬೆನ್ನೆಲ್ಲ ಒಂದೆ ವ್ರಣ;
ಮುಪ್ಪು ಬರುತಿದೆ. ತಮ್ಮ ಜೊತೆಗಿದ್ದವರನು ಗುರು
"ಈ ಒಂಟೆ ಏನ ಹೇಳುತಲಿಹುದು ಬಲ್ಲಿರಾ?"
ಎಂದು ಕೇಳಿದರು. ಪರಿವಾರ, "ಒಂಟೆಯ ಮಾತ
ದೇವರೂ ದೇವರ ಪ್ರವಾದಿಯೂ ತಿಳಿಯುವರು;

ನಾವೆಂತು ತಿಳಿಯೆ ಬರುವುದು?" ಎಂದು ಹೇಳಿದರು.
"ಇದು ಹೇಳುತಿದೆ ನೋಡಿ; 'ನನ್ನೊಡೆಯನಾದವನು
ನನಗೆ ಮುಪ್ಪಡಸುವಿದುವರೆಗೆ ನನ್ನನು ದುಡಿಸಿ
ಬೆನ್ನೆಲ್ಲ ಹುಣ್ಣಾದ ನನ್ನ ಒಡಲನು ಇನ್ನು
ಸದೆದು ಮಾಂಸವ ಮಾರಲೆಣಿಸಿಹನು' ಎನ್ನುತಿದೆ.
ಇದರೊಡನೆ ಹೋಗಿ ಇದರೊಡೆಯನನು ಕರೆತನ್ನಿ."
ಪರಿವಾರದಲಿ ಒಬ್ಬ ಇದರ ಒಡೆಯನ ನಾವು
ಕಾಣೆವೇ ಎಂದು ನುಡಿದನು. "ನೀನು ನಡೆ; ನಾನು
ದಾರಿಯನು ತೋರುವೆನು," ಎಂದು ಗುರು ಬೆಸಸಿದರು.
ಗುರುವಿನೀ ಆಣತಿಯ ಪಡೆದ ಆ ಅನುಯಾಯಿ
ಅದರೊಡನೆ ನಡೆದು ಹಂಟಲ ಎಂಬ ಕೇರಿಯನು
ಸೇರಿದನು. ಅಲ್ಲಿ ಈ ಒಂಟೆ ಯಾರದು ಎಂದು
ಕೇಳಿ ಒಬ್ಬಾತ ಅದು ತನ್ನದೆನೆ, "ಗುರು ನಿಮ್ಮ
ಬರಹೇಳುತಿಹರು," ಎಂದನು. ಒಂಟೆಯಾ ಒಡಯ
ಗುರುಗಳೆಡೆ ಸಾರಿದನು. ಗುರು ಆತನನು ಕುರಿತು,
"ನಿನ್ನ ಈ ಒಂಟೆ ನಮಗೀ ಮಾತ ಹೇಳುತಿದೆ,"
ಎಂದು ಆ ಮೊದಲು ಹೇಳಿದ ಮಾತ ಬೆಸಸಿದರು.
ಆವನೆಂದ: "ಗುರುಗಳೇ, ಅದರ ಮಾತೆಲ್ಲ ನಿಜ."
ಗುರು: "ಇದನು ಬೆಲೆಗೆ ಕೊಡು; ಇದ ನಾವು ಕೊಳ್ಳುವೆವು."
ಒಂಟೆಯವನೆಂದ: "ಬೆಲೆ ಬೇಡ; ಈ ಬಹಳವನು
ತಮ್ಮಂತವರಿಗೆ ಮಾರಲೆ ? ಇದನು ಸುಮ್ಮನೆಯೆ
ತಮ್ಮ ಪಾದಕೆ ಒಪ್ಪಿಸಿದೆನು. ಇದ ಸ್ವೀಕರಿಸಿ."
ಗುರು ಅವನ ಮಾತಿಗೊಪ್ಪದೆ, ಬೆಲೆಗೆ ಅದ ಕೊಂಡು,
ವ್ರಣವ ತೊಳೆಯಿಸಿ ವಾಸಿಮಾಡಿ, ಆ ಒಂಟೆಯನು
ಸಾಕಿಕೊಂಡರು. ತುಂಬ ದೂರವಲ್ಲದ ಯಾವ

ಈ ಸ್ಥಳಕೆ ಆ ಸ್ಥಳಕೆ ಆಳ ಕಳುಹುವ ವೇಳೆ
ಈ ಒಂಟಿಯನು ಏರಿ ಹೋಗೆಂದು ಕಳುಹುವರು.
ಗುರುಗಳ ಮಹತ್ಕಾರ್ಯದಲಿ ಇದೇ ಮುದಿ ಒಂಟಿ
ತನ್ನ ಪಾಲನು ವಹಿಸಿ ತಲೆಯೆತ್ತಿ ನಡೆಯಿತು.

ತನ್ನ ಹಳಿದರು ಎಂದು ಗುರು ಯಾರನೇ ಕುರಿತು
ಕೋಪಗೊಂಡುದು ಇಲ್ಲ. ತಿಳಿಯದವರಿನ್ನೇನ
ಮಾಡಬಲ್ಲರು ಎಂದು ತಾಳಿ ಮನ್ನಿಸುವರು.
ಆಬೂ ಜಹಾಲ್ ಕೊರೇಷಿ ಒಂದು ಒಂಟಿಯನು
ಕೊಂಡುಕೊಂಡನು. ಹಣವ ಕೊಡಲಿಲ್ಲ. ಅದರೊಡೆಯ
ಬೆಲೆಯ ಕೊಡು ಎಂದು ಬಹುಸಲ ಕೇಳಿ, ಕೊಡದಿರಲು,
ಕೊಂಡವನ ಸಂಗಡಿಗರಲಿ ದೂರು ಮಾಡಿದನು.
ಆ ಕೊರೇಷಿಗಳು ಇವನೊವ್ಮೊಮ್ಮೆ ಗುರುಗಳಲಿ
ಬಂದು ಹೋಗುವುದನರಿತಿದ್ದು, "ನಮ್ಮನು ಏಕೆ
ಕೇಳುವೆಯೊ ? ನಿಮ್ಮ ದೊರೆ ಆ ಮಹಮ್ಮದನ ಬಳಿ
ಹೇಳಿಕೊ,ಹಣವ ಕೊಡಿಸುವನು,"ಎಂದರು. ಅವನು
ಗುರುಗಳಿಗೆ ಇವರಿಂತು ಹಳಿದುದನು ತಿಳಿಸಿದನು.
ಗುರು ಅದನು ಒರಿಯು ಹಳಿವೆಂದು ಅಲ್ಲಿಗೆ ಬಿಡರು.
ಅವನೊಡನೆ ಹೊರಟು ಆಬೂ ಜಹಾಲನ ಮನೆಗೆ
ಬಂದು ಬಾಗಿಲ ತಟ್ಟಿದರು. ಅವನು ಬಾಗಿಲನು
ತೆರೆದು ಇವರನು ನೋಡಿ ಮುಖಕೆಟ್ಟು ನಿಂತನು.
ಹಗೆ; ಮನೆಯು ಬಾಗಿಲಿಗೆ ಬರುವ ಕೆಳೆಯೇನಲ್ಲ.
ಮಾತು ತೋರದೆ ಅವನು, "ಏನು ಬಂದಿರಿ?" ಎಂದು
ಕೇಳಿದನು. ಗುರು, "ನೀನು ಇವನಿಂದ ಒಂಟೆಯನು
ಕೊಂಡೆಯಲ್ಲವೆ ? ಬೆಲೆಯ ನಿನ್ನಿಂದ ಈತನಿಗೆ
ನಾನು ಕೊಡಿಸಲು ಬಂದಿಹೆನು," ಎಂದು ನುಡಿದರು.

ಅಬೂ ಜಹಾಲ್ ಮತ್ತೆ ಮಾತನಾಡದೆ ಬೆಲೆಯ
ತೆತ್ತು ಇವರನು ಕಳುಹಿಸನು. ಯಾರೊ, "ಏನಯ್ಯ
ಒಂದು ಮಾತಿಗೆ ಇಷ್ಟು ಮೆತ್ತನಾಗುವುದೆ?" ಎನೆ
ಅಬೂಜಹಾಲ್, "ಒಂದು ಮಾತೆ? ಒಳ್ಳೆಯ ಮಾತು!
ಬಾಗಿಲಲಿ ನಿಂತು, ಬೆಲೆಯನು ಕೊಡಿಸ ಬಂದಿಹೆನು,
ಎಂದು ಅವನೆಂದಾಗ ಅವನ ತಲೆಯಲಿ ಒಂದು
ಸರ್ಪ ಹೆಡೆಹರಡಿ ನಿಂತಿತು. ಹಣವ ಕೊಡದಿರಲು
ಮುಂದೆ ಹಾಯ್ದೆನ್ನ ಕಚ್ಚಲು ಸಿದ್ಧವಾಗಿತ್ತು,"
ಎಂದು ಹೇಳಿದನು. ಹಾವಿದ್ದಿತೋ ಇಲ್ಲವೋ.
ದೇವರೂ ದೇವರ ಪ್ರವಾದಿಯೂ ಬಲ್ಲರು.
ನಾವು ಬಲ್ಲೆವೆ? ನಮಗೆ ಬೇಕಾದುದಿಷ್ಟೆ ಸರಿ.
ಕೊಬ್ಬಿ ನುಡಿದವನು ಕೊಬ್ಬಿದುದು ತಪ್ಪೆಂದರಿತು
ವಿನಯವನು ತೋರಿ ಬಾಳಿದನು. ಇದೆ ಗುರುಮಹಿಮೆ!

ಇನ್ನೆರಡು ಸಂಗತಿಯನೊರೆದು ಈ ಕಥನವನು
ನಿಲಿಸುವೆನು. ಮೋಫ್ಸೈರ ಎಂಬ ಒಬ್ಬ ಗೃಹಸ್ಥ
ಮತ್ತೆ ಹದಿಮೂರು ಜನರೊಡನೆ ಈಜಿಪ್ಟಿನಲಿ
ಉದ್ಯೋಗದೊಳಗಿದ್ದ. ಕೆಲ ವರುಷ ಕಳೆದಿರಲು
ಎಲ್ಲರೂ ಧನವಂತರಾಗಿ ಹುಟ್ಟಿದ ನೆಲಕೆ
ಹಿಂತಿರುಗಿ ಹೊರಟು ಬಂದರು. ದಾರಿಯಲಿ ಮಧ್ಯೆ
ತಂಗಿದೊಂದೂರಿನಲಿ ಇರುಳು ಇವರೆಲ್ಲರೂ
ಕಂಡಂತೆ ತಿಂದು, ಕಂಡುದ ಕುಡಿದು, ಮೈಮರೆತು
ಮಲಗಿದರು. ಮೋಫ್ಸೈರ ನಿಶಿಯಲೆಚ್ಚರಗೊಂಡ.
ಎಲ್ಲರೂ ತಂತಮ್ಮ ಗಂಟ ತಲೆದೆಸೆಗಿಟ್ಟು
ಮೈಮರೆತು ಬಿದ್ದಿಹರು. ತನ್ನ ಒಬ್ಬನದೆ ಹಣ
ಅಷ್ಟೇನು ಹಣವೆ? ಈ ಹದಿಮೂರು ಮಂ[illegible]ಯುಮ

ತನ್ನದಾಯಿತೆ ಅದನು ತಕ್ಕಸ್ಟು ಎನ ಬಹುದು. ಈ ದುರಾಸೆಯ ಭೂತ ಅವನ ತಲೆಯಲಿ ಬೆಳೆದು ಅವನ ಬಿಡೆನೆಂದು ಹಿಡಿಯಿತು. ಎಲ್ಲ ಹದಿಮೂರು ಸಂಗಡಿಗರನು ಅವನು ಅಂದೆ ಪೂರಯಿಸಿದನು. ಅವರ ಹಣವನು ಕೊಂಡು ತಲೆಕಾಲು ತಿಳಿಯದೆ ಓಡಿಬಂದನು. ಇದರ ವಿಷಯ ತಿಳಿದರೆ ತನ್ನ ಹದಿಮೂರು ಸಂಗಡಿಗರಭಿಮಾನಿ ನಂಟು ಜನ ಉಳಿಸಲಾರದು ಎಂದು ಹಜರತರ ಬಳಿಗೈದಿ ಅವರ ಅನುಯಾಯಿಯಾಗುವೆನೆಂದು ತಿಳಿಸಿದನು. ಗುರು ಆಗಲೆಂದು ಬೆಸಸಿದರು. ಹಣವುಳ್ಳವರು ಧರ್ಮಪಾಲನೆಗೆಂದು ಇವರು ಮಾಡಿಹ ಒಂದು ನಿಧಿಗೆ ತಂತಮ್ಮ ಹಣದಲಿ ಐದರಂಶವನು ಕೊಡುವುದಿಸ್ಲಾಮ್ ಪದ್ಧತಿ. ತನ್ನದುರ್ಧನದ ಐದರಲಿ ಒಂದಂಶವನು ನಿಧಿಗೆ ನೀಡುವೆನು ಎಂದ ಮೋಘೈರ. ಗುರುವಿಗೆ ಇವನು ಈ ಧನವ ಎಂತು ಗಳಿಸಿದನೆಂದು ತಿಳಿದಿತ್ತು. ಅವರದಕೆ, “ಎಂಥ ಪಾಪಿಯೆ ಬರಲಿ, ದೈವ ಪಾಪವ ಮರೆತು, ಬಂದನೆಂದೇ ಕರುಣೆಯಿಂದವನ ಕಾಯುವುದು. ನೀನು ಮುಸ್ಲಿಮನಾದುದೆನಗೆ ಸಂತೋಷವೇ. ಎಲ್ಲ ಜೀವವು ಬೇಕು ದೇವರಿಗೆ. ಇನ್ನೆಂತ ಪಾಪ ಮಾಡಿದ ಜೀವ ಬಂದರೂ ದೈವ ಅದ ತೊಳೆದು ಅದ ತನ್ನದೆಂದೆಣಿಸುವುದು. ಈ ಮಾತು ಪಾಪ ಕಲುಷಿತವಾದ ಜೀವಕನ್ವಯಿಸುವುದು; ಪಾಪ ಕಲುಷಿತ ವಿತ್ತಕಲ್ಲ. ಈ ನಿನ್ನ ಹಣ ನಿನಗಿರಲಿ. ಇದರಿಂದ ಒಂದು ಹುಡಿ ನಾಣ್ಯವನು

ಧರ್ಮ ನಿಧಿಯಲಿ ಹಾಕುವುದು ಬೇಡ," . ಎಂದರು.

ಹಜರತ್ ಮಹಮ್ಮದರ ಪುಣ್ಯ ಉನ್ನತ ಜೀವ
ಶಾಂತಿಯಿಂದಿಹುದ ಅಲ್ಲಾಹ್ ಅನುಗ್ರಹಿಸಲಿ.
ಗುರುವರರ ಜೀವನದ ನೂರಾರು ಇಂತಪ್ಪ
ಸುಂದರ ಉದಾತ್ತ ಚರಿತವನೊರೆಯೆ ಬರುವುದು.
ಅದರಲಿ ಪವಾಡವೂ ಇಹವು. ಆದರೆ ಯಾವ
ಎಂಥದೆ ಪವಾಡಕೂ ಮಿಕ್ಕ ಬೆಲೆಯ ಪವಾಡ
ಅವರ ಆ ಮಾನವತೆ, ಹಸುಮನಸು. ಹಸುಮನಸು
ಎನಲು ನೆನಪಾಗುತಿದೆ. ಕೊನೆಗೆ ಹಗೆಯನು ಗೆದ್ದು
ಇವರು ವಿಗ್ರಹ ಮಂದಿರವ ಹೊಕ್ಕು, ಅಟ್ಟದಲಿ
ಎನಿತೊ ನಾಚಿಕೆ ಕೆಟ್ಟ ಮೂರ್ತಿಗಳ ಒಟ್ಟಿಹುದ
ಕಂಡು, ಅದ ಸೆಳೆದು ಒಡೆಯಿರಿ ಎಂದು ಬೆಸಸಿದರು.
ವಿಶ್ವಾಸಿಗಳ ವಳದ ಸೇನಾಧಿಪತಿ ಅಲಿ,—
ಅವರಿಗೂ ದೈವ ಶಾಂತಿಯ ನೀಡಿ ರಕ್ಷಿಸಲಿ,—
ಕೈಚಾಚಿದರು ; ಮೂರ್ತಿ ಎಟುಕದಿದೆ ; ಗುರುಗಳು
ಮಂಡಿ ಕೈಗಳನೂರಿ ಅಂಬೆಗಾಲಲಿ ಕುಳಿತು,
"ನನ್ನ ಬೆನ್ನಲಿ ಏರಿ ಸೆಳೆ" ಎಂದು ಬೆಸಸಿದರು.
ಆಲಿ ಅಂತೇ ಮಾಡಿದರು. "ಈಗ ಎಟುಕಿತೇ ?"
ಎಂದು ಗುರು ಕೇಳೆ ಸೇನಾನಿ, "ಈ ಕ್ಷಣ ನನಗೆ
ಮುಗಿಲು ಬೇಕಾದರೂ ಎಟುಕುವುದು," ಎಂದರು.
ಕೆಲಸವನು ಮುಗಿಸಿ ಸೇನಾನಿ ಬೆನ್ನಿಂದಿಳಿದು
ಗುರುವನೆಬ್ಬಿಸಿ ತುಂಬ ನಲಿದಾಡಿದರು. ಗುರು,
"ಏನಯ್ಯ ಇನಿತು ಸಂತೋಷ ?" ಎನೆ ಸೇನಾನಿ,
"ಎಂಥ ಉನ್ನತ ಪದವಿಯಿಂದ ಕೆಳಗಿಳಿದಿಹೆನು.

ಆದರೂ ನನಗೆ ನೋವಿಲ್ಲ," ಎಂದರು. ಗುರು
"ಆಲಿ, ನಿನ್ನನು ಮಹಮ್ಮದ್ ಎತ್ತಿ ಜೆಬ್ರಯಿಲ್
ಇಳಿಸಿದನು. ಇಂತಿರಲು ನೋವಹುದೆ ?" ಎಂದರು.
ಎಂಥ ಹಸುಮನಸು ಅದು ! ಇನ್ನೆಂಥ ಸೌಜನ್ಯ!

ಎಲ್ಲ ಗುರುಗಳ ಚರಿತವೂ ಪವಾಡಗಳಿಂದ
ಅವರ ಮಹಿಮೆಯನು ಸಾರುವೆವೆಂದು ತೊಡಗಿಹವು.
ಒಂದು ರೀತಿಯ ಮನಕೆ ಅದ್ಭುತವ ಕಾಣದಿರೆ
ನಂಬಿಕೆಯೆ ಬರದು. ನಿಜದಲಿ ಎಲ್ಲ ಅದ್ಭುತಕೆ
ಹಿರಿಯ ಅದ್ಭುತ ಇಂಥ ಗುರುವರರ ಸೌಜನ್ಯ;
ವಾತ್ಸಲ್ಯ; ಸರಳ ಸ್ವಭಾವ. ದೇವರ ಜೊತೆಗೆ
ತಾನು ಸಂಭಾಷಿಸುವೆನೆಂದು ತಿಳಿದಿದ್ದ ಗುರು,
ಶಿಷ್ಯನಿಗೆ ಅಟ್ಟ ಎಟುಕದು ಎಂದು ತಾ ಬಗ್ಗಿ
ಅಂಬೆಗಾಲಲಿ ಕುಳಿತು ಬೆನ್ನನೇರೆಂದರೆನೆ
ನಂಬಬಹುದೇ? ಯಾವ ಹಿರಿಯು ಇದ ಮಾಡುವನು?
ರಾಜನೇ ? ಚಕ್ರವರ್ತಿಯೆ ? ಇಂತು ಮಾಡುವುದು
ತಮ್ಮ ಗೌರವಕೆ ಕುಂದವರಿಗೆ; ಕುಂದು ನಿಜ:
ಲೆಕ್ಕ ಸಿಕ್ಕುವ ಮಿತದ ಗೌರವಕೆ ಇದು ಕುಂದು.
ಐದು ಹಣದಲಿ ಒಂದು ಹಣ ಕಳೆಯೆ ಉಳಿಯುವುದು
ನಾಲ್ಕೆ. ಅದರಿಂದಲೇ ಈ ಜನರು ಅಂಜುವರು.
ಕೋಟಿ ಕೋಟಿಯನಂತ ರಾಶಿಯೆನೆ ಒಟ್ಟಿರುವ
ಗುರುವರರ ಮರ್ಯಾದೆ ಇಂತು ಕುಂದುವುದಿಲ್ಲ.
ಪೂರ್ಣದಲಿ ಪೂರ್ಣ ಕಳೆದರು ಪೂರ್ಣ ಉಳಿಯುವುದು.

ಎಲ್ಲ ಧರ್ಮಗಳಂತೆ ಗುರು ಮಹಮ್ಮದರದೂ
ಬಾನ ತಿಳಿನೀರು ನೆಲದಲಿ ಕದಡಿ ಕೆಡುವಂತೆ

ಮಾನವನ ಬಾಳಿನಲಿ ಬಣ್ಣಗೆಟ್ಟಿಹುದು ದಿಟ.
ಆದರೇನಂತೆ ? ಗುರು ಜಗಕೆ ಸಾರಿದ ಧರ್ಮ
ಎಂದಿಗೂ ಹಿರಿದೆ. ಲೋಕದ ಎಲ್ಲ ಧರ್ಮಗಳು
ಒಂದಾಗಿ ಮನುಜ ಕುಲವೆಲ್ಲದರ ಒಂದೇ
ಧರ್ಮ ಬಹ ಕಾಲದಲಿ ರೂಪುಗೊಳ್ಳುವ ವೇಳೆ
ಆದರ ಹಲ ಮುಖ್ಯ ಗುಣ ಈ ಮಹಾತ್ಮರದೆಂದು
ಬಲ್ಲವರು ಒಪ್ಪುವರು. ಗುರುಗಳಿಗೆ ಜಯವಕ್ಕೆ.

ಜಯಭೇರಿ

ಜಯಭೇರಿ ? ಜಯ ಕೊನೆಗೆ. ಮೊದಲಲೇ ಜಯವೆ?
ಯಾರಿಗೇ ಇರಲಿ, ಜಯವೇನಸಿತು ಸ್ವಯವೇ ?
ಎದುರಾಳಿಯನು ಮೋದಿ ಗೆದ್ದುದನು ಸಾರಿ
ಹೊಡೆವ ಗೆಲವಿನ ದಿನದ ಭೇರಿ ಜಯಭೇರಿ.

ಜಯ ಕೊನೆಗೆ? ಕಾಣುವುದು ಕೊನೆಗೆ. ಸರಿ. ಅದನು
ತರುವ ಸಾಧನ, ನಮ್ಮ ಒಳ ಹೊರಗ ಹದನು,
ಮೊದಲಿಂದ ಇರಬೇಕು. ಅದರ ಪರಿ ಎಂತು ?
ಅದ ನೋಡಿ, ಎರಡು ಪಕ್ಷದ ಮಧ್ಯೆ ನಿಂತು.

ಭಾಯಿ ಭಾಯ್ ಭಾಯ್ ಎಂದು ಒದರುತಿಹ ಹೊತ್ತು
ಚೀನೀಯ ಮನಸು ಕೃತ್ರಿಮವ ಹಿಡಿದಿತ್ತು.
ನಂಬಿಕೆಯ ಮೂಡಿಸುತ ದ್ರೋಹವನು ಬಗೆದು
ಹಿಡಿದರಿವರೆಮ್ಮ ಹೆಗ್ಗತ್ತಿಡೆಗೆ ನೆಗೆದು.

ಏನಿದೇತರದೆಂದು, ಇಂತುಂಟೆ ಎಂದು,
ನೊಂದ ಗೆಳೆಯರು ನಾವು ಕಣ್ತೆರೆವ ಮುಂದು,
ಕೆಸರ ಕೂಪಕೆ ನಮ್ಮ ದೂಡಿ, ದಡ್ಡರನು
ಬೆಳ್ಳಿಸಿದೆವೆಂದು ಹಿಗ್ಗಿದುದಿವರ ತೆರನು.

ಗೋವ ಮಂದೆಯ ಮೇಲೆ ಹಾರಿಬಹ ಹುಲಿಯೋ,
ನೆಲನ ನುಂಗಲು ಮುಂದೆಬಹ ಕಡಲ ಅಲೆಯೋ,
ಸೀತೆಯನು ಕದ್ದ ರಾವಣನ ಹೊಸ ಪರಿಯೋ,
ಕೋಳಿಯನು ಕದಿಯೆ ಸುಳಿಯುವ ಇರುಳ ನರಿಯೋ?

ಮೋಸ ಬದುಕಲು ಸುಳ್ಳ ನೆರವಿರಲೆಬೇಕು.
"ನಿನ್ನ ತಪ್ಪನು ಜೊತೆಯುವನ ಮೇಲೆ ಹಾಕು:"
ಇದುವೆ ವಂಚಕ ಸೂತ್ರ. ತಾವೆಮ್ಮ ತಾಗಿ,
ಇವರು ಮೊರೆದರು : "ಭರತವರ್ಷ ತಾನಾಗಿ

"ನಮ್ಮ ತಾಗಿತು. ಆತ್ಮರಕ್ಷಣೆಗೆ, ತೀರ
ವಿಧಿಯಿಲ್ಲ, ನಾವು ಕಾದಿದೆವು. ದುರ್ವಾರ
ದುಷ್ಟ ಜನ ಇವರಿಂದ ನಮಗೆನಿತು ಕಷ್ಟ !
ಹಾ ! ಭರತವರ್ಷವಿದು ದುಷ್ಟ, ಸುಸ್ಪಷ್ಟ."

ಆಯುಧವ ಸಿದ್ಧ ಹಿಡಿದಿದ್ದ ಈ ಜನವ
ಅದ ಹುಡುಕುವರು ತಾಗಿದೆವು : ನೋಡಿ ಘನವ !
ನಿದ್ರಿಸುತಲಿದ್ದ ಮನೆವಳ ಕದಿವನಿದ್ದ ;
ಅದ ತಪ್ಪಿಸಲು ಹೆರವ ಸುಳಿದೊಳಗೆ ಬಿದ್ದ !

ಅಯ್ಯ ಮೋಟ್ಸೇಟುಂಗ್, ಚೇಯಿ, ಚೂ ಎನ್ ಲೇಯ್
ತಿಳಿವು ಸಾಲದ ನಮ್ಮ ಜನ, ನಿಮ್ಮ ಭಾಯ್ ಭಾಯ್
ಸೋಗ ಮಾತಿಂದ ಎಚ್ಚರ ಮರೆತು, ನಿಮ್ಮ
ತಡೆಯಲಾಗದ ಪರಿಯನಿದ, ನಿಮ್ಮ ಧರ್ಮ,

ನಿಮಗಾದ ಜಯವೆಂದು, ನಮ್ಮ ಸೋಲೆಂದು,
ನೆನೆವ ಭ್ರಾಂತಿಗೆ ಸಿಲುಕಬೇಡಿ, ಪ್ರಿಯಬಂಧು.
ಜಯ ಕೊನೆಗೆ; ಮೊದಲಿನ ಅಚಾನಕದ ಗೆಲವು
ಗೆಲವಲ್ಲ ; ಜಯ ಕೊನೆಗೆ ನಿಲ್ಲುವನ ನಿಲುವು.

ನಮ್ಮ ನಂಬುಗೆ, “ಸತ್ಯಮೇವ ಜಯತೇ” ಎಂದು;
“ನಾನೃತಂ” ಎಂದು. ನಂಬುಗೆ ಇಂಥದಿನ್ನೊಂದು,
“ಯತ್ರ ಧರ್ಮಸ್ತತ್ರ ಜಯ” ಎಂದು. ನೀವೇನ
ನಂಬಿಹಿರಿ ? ಏನ ನಂಬಿಹುದು ಹೊಸ ಚೀನಾ ?

ಸುಳ್ಳು ಗೆಲ್ಲುವುದೆಂದೆ ? ಅನ್ಯಾಯ ಸರಿಯೆಂದೆ ?
ಅಂತಲ್ಲದಿರೆ ನೀವು ಏಕಿಂತು ಈ ಹಿಂದೆ
ನಿಮ್ಮ ಹಿರಿಯರ ಹೊರೆದ ಬುದ್ಧನನು ಮರೆತು
ಹಿಂಸ್ರ ಜನರಾಗಿಹಿರಿ ಸೆಟೆದಿಂತು ಬೆರೆತು ?

ಭಾರತದ ಜನ ನಿಮ್ಮ ನೆಲದ ಅಂಗುಲವ
ಬಯಸಿಲ್ಲ. ನೀವೇಕೆ ನಮಗಮಂಗಳವ
ಮಾಡಲೆದ್ದಿರಿ ? ಧರ್ಮ ಎತ್ತ ಜಯ ಅತ್ತ ಎನೆ
ನಾವು, ನೀವಪ್ಪಿದಿರಿ ಅಪಜಯದ ಕತ್ತಲನೆ.

ದಿಟ ಸಟೆಯ ಕದನದಲಿ ಸಟೆ ಮೊದಲು ಗೆದ್ದು
ಕೊನೆಗೆ ಸೋಲುವುದು. ದಿಟ ಬಿದ್ದರೆಯು ಎದ್ದು
ಕೊನೆಗೆ ಗೆಲ್ಲುವುದು. ಇಂತಾದುದನು ನೂರು
ಬಾರಿ ನೋಡಿದೆ ಲೋಕ. ದಿಟ ಗೆಲವ ಬೇರು.

ಆದರಿಂದ, ಸೋದರರೆ, ನಯಕೆ ಕಿವಿಗೊಟ್ಟು
ಹಿಂದಿರುಗಿ ಬದುಕಿ ; ಇಲ್ಲವೆ ಸತ್ತು ಕೆಟ್ಟು,
ಹಿಟ್ಲರ್ ಮುಸೋಲಿನಿಯ ತೆರ ಮೊದಲು ಸೊಕ್ಕಿ,
ಬೊಬ್ಬಿಟ್ಟು, ಕೊನೆಗೆ ಕೆಡೆವಿರಿ ಮಣ್ಣು ಮುಕ್ಕಿ.

ಬಂಧುಗಳ ಕೊಲ್ಲಲಾರದೆ ಅಂದು ಪಾರ್ಥ
ಸೆಣಸ ಹಿಂಜರಿದ ಪರಿ ಈ ನುಡಿಯ ಅರ್ಥ.
ಶಾಂತಿಯಲಿ ನಡೆಯಿರಿ ; ನಿಮಗೆ ಸುಖವಕ್ಕೆ.
ಒಲ್ಲಿರಾ ? ನಿಮಗೆ ಕಾದಿದೆ ಸೋಲ ತೆಕ್ಕೆ.

ನಾವು ಜಯಿಸುವ ಮಂದಿ. ದಿಟ ನಮ್ಮ ದೈವ.
ದಿಟಕಾಗಿ ನಾವೆಮ್ಮ ಮೆಯ್ ಮನಸು ಜೀವ,
ಮನೆ ಮಠವ, ನೆಲ ಹಣವ, ಸಂತಸದಿ ನೀಡಿ
ಕಾದಲಣಿ. ಇದರಲಿನಿಸೂ ಇಲ್ಲ ಖೋಡಿ.

ಜಯಭೇರಿ

ಭರತವರ್ಷದ ಕುವರ ಕುವರಿಯರು ನಾಡ
ಗೌರವದ ಸಲು ಏತರದನೆ ಈಡಾಡ
ಅನುವಾಗಿಹರು. ದೈವ, ಸತ್ಯ, ಸ್ವದೇಶ
ಇವು ಒಂದು ನಮಗೆ; ಒಂದೇ ಅಭಿನಿವೇಶ.

ಬಿದ್ದ ಕೆಸರಿನ ಕುಣಿಯ ಬಿಟ್ಟು ದಡವೇರಿ,
ನಿಮ್ಮ ಮೋಸದ ಮೇಲೆ ಸೋಲ ಹೊರೆ ಹೇರಿ,
ನಿಮ್ಮ ಸಟ್ಟುವ ಪಣವ ತೊಟ್ಟಿಹುದ ಸಾರಿ,
ಹೊಡೆವುದಿದೊ ನನ್ನ ಒಡಹುಟ್ಟು ಜಯಭೇರಿ.

ಭೇರಿ ಮೊರೆವುದು ನಾವು ಗೆದ್ದೆವೆಂದಲ್ಲ.
ಗೆದ್ದವನು ಸಹ ಗೆಲವು ತನ್ನದೆನೆ ಸಲ್ಲ.
ಸತ್ಯವೇ ಜಯಿಸುವುದು. ಈ ಹದನ ಸಾರಿ
ಮೊದಲಲೇ ಮೊಳಗುತಿದೆ ನಮ್ಮ ಜಯಭೇರಿ.

ಬಸವಣ್ಣನವರನ್ನು ಕುರಿತು

(ಮೂರು ಅಷ್ಟ ಷಟ್ಪದಿ)

೧

ಎಂದೆಲ್ಲಿ ಲೋಕದಲಿ ಧರ್ಮ ಇಳಿಮುಖವಾಗಿ
ಧರ್ಮವಲ್ಲದುದು ಮೇಲ್ಗೈ ಆಗುವುದು ಅಂದು,
ಅಲ್ಲಿ, ನಾ ಸಾರಿ ಧರ್ಮವನು ಕಾಯುವೆನೆಂದು
ಧೈರ್ಯ ನೀಡಿದ ಸತ್ಯ, ತನ್ನ ವಚನಕೆ ಬಾಗಿ,
ಶತಮಾನಗಳ ಹಿಂದೆ ಕನ್ನಡದ ಸುತನಾಗಿ
ಮೈತ್ತಾಳಿದು, ಜನಮನದ ಸಂದೇಹಗಳ ಬಿಡಿಸಿ,
ಧರ್ಮ ಸಂಸ್ಥಾಪನ ಮಹಾಕಾರ್ಯವನು ನಡೆಸಿ,
ಮರೆದು ಕರಗಿತ್ತು ಕೂಡಲ ಸಂಗಮಕೆ ಹೋಗಿ.
ಯಾವುದೆ ವಿಭೂತಿಮತ್ಸತ್ತ್ವವಿದೆ, ಅದ ನೀನು
ನನ್ನಂಶದಿಂದ ಬಂದಿದೆ ಎಂದು ತಿಳಿ ಎಂದು
ಹೇಳಿತದುವೇ ದೈವ. ಒಂದು ಅದು, ಎರಡಲ್ಲ.
ಅದರ ನೆಚ್ಚಿನ ವಚನ ಎಂದಿರಲಿ ಬರಡಲ್ಲ.
ಅದುವೆ ಗುರು, ಜಗದದೊರೆ, ಅದೆ ದೀನಜನಬಂಧು,
ಅದೆ ಎಲ್ಲ ಗುರುಪಂಕ್ತಿ, ಎಂದು ತಿಳಿವುದು ಜಾಣು.

೨

ನಾನು ಹಾರುವನೆಂದು ಹಿರಿಯನೇ? ಮಾದಾರ
ಚೆನ್ನಯ್ಯ ಮಾದಾರನೆಂದೆನಗೆ ಕಿರಿಯನೇ?
ಜಾತಿ ಹುಟ್ಟಿಂದಲ್ಲ; ಗುಣದಿಂದ; ಅರಿಯೆನೇ?
ಎಂದು ನುಡಿ ನುಡಿದಂತೆ ನಡೆದ ಧೀರೋದಾತ್ತ
ನಿನ್ನನಿನ್ನೆನಿತು ಹೊಗಳುವುದು? ಜಗದಾಧಾರ
ತತ್ತ್ವ ನಿನ್ನಲಿ ನಿಂತು ನಿನ್ನ ನಡೆಸಿತ್ತಾಗಿ,
ನೀನಂತು ನಡೆದೆ, ದೈವದ ಕೇವಲ ನಿಯೋಗಿ.
ನಿನಗೆಲ್ಲ ಜಗ ನಂಟು; ಇಲ್ಲ ಯಾರೂ ದೂರ.
ಓ ಅಣ್ಣ, ನನ್ನಣ್ಣ, ಕನ್ನಡಿಗ ಕುಲದಣ್ಣ,
ಎಲ್ಲ ಜನತೆಗಳಣ್ಣ, ಬಸವಣ್ಣ, ನಿನ್ನೆದೆಯ
ಕನಿಕರದ ಒರತೆಯಿನಿತನು ನಮ್ಮ ಜನತೆಯಲಿ
ಇಂದೊಸರುವಂತೆಸಗು. ಹೊಸತೊಂದು ಘನತೆಯಲಿ
ನಾಡು ಬಾಳಲಿ. ದಾರಿ ತೋರು. ಶಿವಸನ್ನಿಧಿಯ
ಕಾಂಬಂದ ಪರೆಕಳೆದು ತೆರೆ ನಮ್ಮ ಒಳಗಣ್ಣ.

೩

“ಅಯ್ಯ ಎಂದೆಯ ಸ್ವರ್ಗ; ಎಲವೊ ಎಂದೆಯೊ ನರಕ.
ಮರ್ತ್ಯಲೋಕವಿದು ಕರ್ತಾರನದು ಕಮ್ಮಟ;
ಇಹದಿ ಸಮ್ಮತರಾದವರೆ ಪರದಿ ಸಮ್ಮತ.
ದಯೆ ಇಲ್ಲದಿಹ ಧರ್ಮ ಎಂಬುದುಂಟೇ ? ಮರುಕ
ಇರಲಿ ಸರ್ವ ಪ್ರಾಣಿಗಳ ಕುರಿತು. ಆಂತರಿಕ
ದಾರ್ಢ್ಯದಲಿ ನಂಬಿ ಕರೆ ; ಓ ಎನ್ನುವನು ಶಿವ.
ನಂಬಿ ನೆನೆ ; ತಂದೆ ನಿನ್ನೊಳಗಿಹನು ಘನಿಸುವ.
ಶಿವನಿಗರ್ಪಿಸಿಕೊ ನಿನ್ನನು; ಆಗದಿರು ಪಿರಿಕಿ.”
ಎಂಥ ಉಪದೇಶ ನಿನ್ನದು ಅಣ್ಣ ! ಇದರಡಿಯ
ಸಿದ್ಧಿ ಅದು ಎಂಥದು ! ಭಕ್ತಿ, ಕರ್ಮ, ಜ್ಞಾನ,
ಒಂದಾಗಿ ನೀಡಿದವು ಈ ಸಿದ್ಧಿಯನು ನಿನಗೆ.
ಅದರ ಲೇಶವನನುಗ್ರಹಿಸಣ್ಣ ನೀ ನನಗೆ,
ನನ್ನ ಸೋದರ ಜನಕೆ. ಈ ಅನುಗ್ರಹದಾನ
ರಕ್ಷಿಸಲಿ ಲೋಕವನು. ಬಾ, ಅಣ್ಣ, ಕೈ ಹಿಡಿಯ !

ತನ್ನತನ

ಪಾವುಗಡದ ಮಲೆಯ ಕೋಡು
ತೋಳ ಚಾಚಿ ನಭವ ತಾಕಿ
ಓಡುವ ಮೋಡಗಳ ಜೊತೆಗೆ
ಆಡುತಿಹುದು ಅಡ್ಡಹಾಕಿ ;

ಬೈಗುಸಾರೆ ಐದು ಹಕ್ಕಿ
ಗೂಡ ಕುರಿತು ಓಡುತಲಿವೆ ;
ಹೊಂಬಿಸಿಲನು ಹೊದೆದ ವನದ
ಗಿಡ ಮರ ಅವ ನೋಡುತಲಿವೆ ;

ಸಂಜೆ ಬಾನು ಹೊಂಬೆಳಗನು
ನೆಲದಗಲಕೆ ಹಾಸುತಿದೆ ;
ದಿವಸವೆಲ್ಲ ಮೊರೆದ ಗಾಳಿ
ಶಾಂತವಾಗಿ ಬೀಸುತಿದೆ ;

ಏನು ಏಕೆ ಎಂಬ ಎಲ್ಲ
ಅಲೆಯ ಮರೆತು ಎನ್ನ ಮನ
ಹೇಳ ತಗದ ಸುಖವ....ಅದೆಯೊ
ನನ್ನುಸಿರಿನ ತನ್ನತನ ?

ಕರುಣಿ ದೈವ

ಎಂತು ಹೊಗಳಲಿ ನಿನ್ನ ಕರುಣೆಯನು, ತಂದೆ!
ಸಂತತ ನಿರಂತರ, ಕೃಪಾಳು, ಪೊರೆವುದೆ ನಿನ್ನ
ಪಂತವೆಂದವನು ಸಲಹುತ ನೀನು ನಿಂದೆ.

ಎಳೆಯ, ತಿಳಿವಿಲಿ, ತಪ್ಪಿ ನಡೆಯೆ,ಮುಳಿಯದೆ ನೀನು
ಕಳಕಳಿಸಿ ಕೆಡದಂದ ಹಿಂದಕೆಳೆದೆ;
ನಳಿನಾಕ್ಷ, ಹರಿಯ ಅ[illegible]ರೀಕದಾಳಕೆ ಇಳಿಯೆ
ಮುಳುಗ ಬಿಡದದ ನೀನು ಉದ್ಧರಿಸಿದೆ.

ಹಣ ಬಂದು ಹೆಮ್ಮೆಯನು ತಂದ ಹೊತ್ತಲಿ,ಅಣುಗ,
ಗುಣ ಹಿರಿದು, ಹಣ ಅಲ್ಲ, ಎಂದು ಒಳಗೆ
ಚಣ ಚಣವು ಗುಣು ಗುಣಿಸಿ ನೆನವ ನೀಡಿದೆ, ಉಸಿರ
ದಣಿ, ಓಜ, ಭರ್ತ, ಉದ್ಧಾರಕರ್ತ.

ಯುಗವಾದಿಯಿಂದ ಜಗವೆಲ್ಲವನು ಇದುವರೆಗೆ
ಸೊಗದಲಿರಿಸಿದ ಕರುಣಿ ನೀನು ನನ್ನ
ಸೊಗದಿ ಬಾಳಿಸಿ ಕಾವೆ, ಸಂದೇಹವಿಲ್ಲಿದಕೆ,
ನಿಗಮವಂದಿತ, ನಿತ್ಯ, ನಿರವದ್ಯ, ಹೇ!

ಆಟ

ಬಾ ಎಂದು ನಾ ಕರೆದೆ; ನೀ ಎದುರಿಗೈತಂದೆ;
ಬಂದುದರಿಯದೆ ನಾನು ನಿಂದೆ;
ಎದುರಿಗೈತರುತ ನೀ ಕಣ್ಣ ನೋಟವ ಕದ್ದೆ;
ಕರುಣೆಯಲೆ ಇಂಥ ಕುಂದೆ?

ಹಸಿವು ಎಂದಿತು ಹಸುಳೆ; ತಾಯಿ ಅನ್ನವ ತಂದೆ;
ನೀಡಿ ಇರಿಸಿದೆ ಬಾಯ ಮುಂದೆ;
ಅನ್ನವನು ತುಟಿಗಿಟ್ಟು ಬಾಯ ಮುತ್ತನು ಕೊಟ್ಟೆ;
ಹೊರೆವಾಕೆಯಲಿ ನಡತೆ ಚಂದೆ?

ನಲ್ಲ ನಲ್ಲೆಯರಾಟದಲಿ ಕಣ್ಣಮುಚ್ಚಾಲೆ
ಉಂಟು; ಈ ಹದನ ನಾ ಬಲ್ಲೆ.
ಆದರದು ಬರಿ ಕಣ್ಣಮುಚ್ಚಿನಲೆ ಮುಗಿಯಲೆ?
ಇಲ್ಲವೇ ಒಡನಾಟ, ಲಲ್ಲೆ?

ನಿನ್ನ ಕಂಡಾಕ್ಷಣವೆ ನನ್ನ ಮರೆಯುತ ನಾನು
ನಿನ್ನ ಸವಿಯದೆ ಇಂತು ನೊಂದೆ.
ನಾನೆನ್ನುವುದು ನಂದಿರದೆ ನೀನು ಮರೆಯದೆ
ಅನುಭವಿಸುವುದು ಎಂದು ತಂದೆ?

ರಾಧಾಕೃಷ್ಣ

ಹೇ ಕೃಷ್ಣ, ಶ್ರೀ ಕೃಷ್ಣ, ನನ್ನೆದೆಯ ರಂಗದಲಿ
ಯಾವ ಆಟವ ಹೂಡಿ, ರಾಧಾ ಮನೋಹರ,
ಈ ಬಾಳ ಮರುಳು ಮಾಡುತಲಿಹೆ? ಹೃಷೀಕೇಶ,
ಜೀವೇಶ, ಇದು ಯಾವ ಗಾರುಡಿಯ ಮೋಹರ
ಮನವ ಮುಸುಕಿತು? ಕರುಳ ನುಲಿಸಿ ಭಾವವನೆಲ್ಲ
ಸೆರೆಹಿಡಿದು ನಿಲಿಸಿ ತನ್ನೊಂದಿಂದ್ರ ಜಾಲದಲಿ,
ಇಹುದಾವುದಿಲ್ಲವಾವುದು ಎಂಬರಿವ ಕಲಕಿ,
ತನ್ನಿಚ್ಛೆಯಲಿ ಕುಣಿಸುತಿದೆ ಚಿತ್ರತಾಲದಲಿ?
ಓ ಕೃಷ್ಣ, ಶ್ರೀ ಕೃಷ್ಣ, ರಾಧಾ ಮನೋಹರ
ಜೀವೇಶ ಇದು ಯಾವ ಗಾರುಡಿಯ ಮೋಹರ?

ಬೆಲೆ : ರೂ. ೨-೦೦